

# ಸಿಹಿ ಕಹಿ


ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ

SIHI KAHI
KANNADA DAILY MORNING
BAGALKOT

RNI REG No. : KARKAN/2016/75068



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119



Volume : 07 Issue : 256 Sunday 22-06-2025 E-mail : maruti.b.hosamani76@gmail.com Page: 4 Price : Rs. 1/-


## "ರಾಷ್ಟ್ರೀಯ ಸಮಾಜ ಸೇವಾ ರತ್ನ ಪ್ರಶಸ್ತಿ" ಗೆ – ಕಲಾವಿದಾ ಸಿ.ಎಚ್ ಉಮೇಶ್ ನಾಯ್ಕ್ ಆಯ್ಕೆ






**ಸಿಹಿ ಕಹಿ ಸುದ್ದಿ,**
**ದಾವಣಗೆರೆ :** ಭಾರತೀಯ ಕಲಾ ಸಾಂಸ್ಕೃತಿಕ ಅಕಾಡೆಮಿ (ರಿ) ದಾವಣಗೆರೆ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆ ಗೈದ ಸಾಧಕರುಗಳಿಗೆ ಇದೇ ಜೂನ್ ತಿಂಗಳಿನಂದುವಿಚಾರಸಂಕಿರಣಹಾಗೂಪ್ರಶಸ್ತಿಪ್ರಧಾನ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಂಡಿರುತ್ತೇವೆ. ಆದ್ದರಿಂದ ಈ ಕಾರ್ಯಕ್ರಮದಲ್ಲಿ ತಾವು ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ನಮ್ಮ ಅಕಾಡೆಮಿ ವತಿಯಿಂದ ತಮಗೆ "ರಾಷ್ಟ್ರೀಯ ಸಮಾಜ ಸೇವಾ ರತ್ನ" ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಆದ್ದರಿಂದ ತಾವುಗಳು ಸ್ವ–ಕುಟುಂಬ ಸಮೇತ ಕಾರ್ಯಕ್ರಮಕ್ಕೆ ಆಗಮಿಸಿ, ನಾಡಿನ ಹೆಸರಾಂತ ಸ್ವಾಮೀಜಿಗಳು, ಸಾಹಿತಿಗಳು, ಹಾಗೂ ಚಿತ್ರ ನಟರು, ನಿರ್ದೇಶಕರು, ಪ್ರಮುಖ ಗಣ್ಯರ ಅಮೃತ ಹಸ್ತದಿಂದ ಪ್ರಶಸ್ತಿಯನ್ನು ಸ್ವೀಕರಿಸಲು ಪತ್ರಿಕಾ ಪ್ರಕಟಣೆಯ ಮೂಲಕ ಕೋರಲಾಗುವುದು ಎಂದ ಅವರು ಜಾನಪದ ಗಾಯನ ಕ್ಷೇತ್ರದಲ್ಲಿ ವೈಶಿಷ್ಟವಾಗಿ ಸಾಧನೆ ಗೈದ ಖ್ಯಾತ ಜನಪದ ಕಲಾವಿದರಾದ ಸಿ.ಎಚ್ ಉಮೇಶ್ ನಾಯ್ಕ ಚಿನ್ನಸಮುದ್ರ ಇವರಿಗೆ ಭಾರತೀಯ ಕಲಾ ಸಾಂಸ್ಕೃತಿಕ ಅಕಾಡೆಮಿ ದಾವಣಗೆರೆ ಇವರಿಂದ ಸಿ.ಹೆಚ್ ಉಮೇಶ್ ನಾಯ್ಕ ಇವರಿಗೆ ರಾಷ್ಟ್ರೀಯ ಸಮಾಜ ಸೇವಾ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಿದ ವಿಚಾರ ಇದು ಬಂಜಾರ ಸಮುದಾಯಕ್ಕೆ ಅತ್ಯಂತ ಹೆಮ್ಮೆಯ ವಿಚಾರವಾಗಿದೆ ಎಂದು ವರದಿಯಾಗಿದೆ.

## ಯಲಗೋಡ ಗ್ರಾ.ಪಂ ಹಣೆಬರಹ–ಮುಕ್ತ ಮನಸ್ಸಿನಿಂದ ನೋಡಿರೀ

**ಸಿಹಿ ಕಹಿ ಸುದ್ದಿ,**
**ಯಲಗೋಡ :** ಹಳ್ಳಿಗಳು ಅಭಿವೃದ್ಧಿ ಆಗಲಿ ಎಂದು ಸರ್ಕಾರ ಮೂರು ನಾಲ್ಕು ಹಳ್ಳಿಗಳು ಕೂಡಿ ಒಂದು ಗ್ರಾಮ ಪಂಚಾಯತಿ ನಿರ್ಮಾಣ ಮಾಡಿದೆ ಆದರೆ ಅಭಿವೃದ್ಧಿ ಮಾಡದೆ ಬೋಗಸ್ ಬಿಲ್ ಮಾಡಿ ಹಣವನ್ನು ನುಂಗ್ಗುವ, ಅಭಿವೃದ್ಧಿ ಅಧಿಕಾರಿಗಳು ಹಾಗೂ ಅಧ್ಯಕ್ಷರು, ಸದಸ್ಯರು ಕೂಡಿ ರಾಜ್ಯಗಳಲ್ಲಿನ ಗ್ರಾಮ ಪಂಚಾಯತಿಗಳು ಹದಗೆಟ್ಟು ಹೋಗಿವೆ. ದೇವರ ಹಿಪ್ಪರಗಿ ತಾಲ್ಲೂಕಿನ ಯಲಗೋಡ ಗ್ರಾಮ ಪಂಚಾಯತಿಯಲ್ಲಿ ಹಳ್ಳಿಗಳಲ್ಲಿ ಸಾರ್ವಜನಿಕರು ಕೊಡುವ ಸ್ಥಳಗಳಲ್ಲಿ ಹಾಗೂ ಬಸ್ ನಿಲ್ದಾಣದಲ್ಲಿ, ದೇವರ ಸ್ಥಾನಗಳ ಮುಂದೆ ಸಾರ್ವಜನಿಕರು ವಿಶ್ರಾಂತಿ ಮಾಡಲು ಸರ್ಕಾರ ಸಿಮೆಂಟ್ ನ ಕುರ್ಚಿಗಳನ್ನು ನಿರ್ಮಾಣ ಮಾಡುವುದಕ್ಕೆ 15 ಹಣಕಾಸಿನ ಅನುದಾನದಲ್ಲಿ ಬಳಸಬೇಕು ಎಂದು ಸರ್ಕಾರ ಹೇಳಿದೆ. ಆದರೆ ಈ ಊರಿನ




ಗ್ರಾಮ ಪಂಚಾಯತಿಯಲ್ಲಿ ಸಿಮೆಂಟ್ ಕುರ್ಚಿಗಳು ತಂದಿದ್ದಾರೆ. ಸರಿಯಾದ ಕುರ್ಚಿಗಳು ತಂದಿಲ್ಲಾ ಅವುಗಳಿಗೆ ಸುಣ್ಣ ಬಣ್ಣ ಮಾಡಿ ಗ್ರಾಮ ಪಂಚಾಯತಿ ಹೆಸರು ಬರೆದು ಸಾರ್ವಜನಿಕರು ಇರುವ ಸ್ಥಳಗಳಲ್ಲಿ ನಿಲ್ಲಿಸಬೇಕು ಆದರೆ ಇಲ್ಲ ಬಸ್ ನಿಲ್ದಾಣದಲ್ಲಿ ಎರಡೂ ಬಿದ್ದಿವೆ. ಕರಿಸಿದ್ದೇಶ್ವರ ದೇವಸ್ಥಾನ ಹತ್ತಿರ ಎರಡೂ ಬಿದ್ದಿವೆ. ದಾವಲಮಲ್ಲಿಕ ದೇವಸ್ಥಾನ ಹತ್ತಿರ ಎರಡೂ ಬಿದ್ದಿವೆ. ಅಂಬೇಡ್ಕರ್ ಸರ್ಕಲ್ ಹತ್ತಿರ ಎರಡು ಬಿದ್ದಿವೆ ಹಾಗೂ ಗ್ರಾಮ ಪಂಚಾಯತಿ ವಾಪ್ತಿಯಲ್ಲಿ ಬರುವ ಹಳ್ಳಿಗಳಾದ ವಂದಾಲ, ಕದರಾಪೂರ ಈ ಗ್ರಾಮದಲ್ಲಿ ಹೇಗೆ ಬಿದ್ದಿವೆ. ಲಕ್ಷಗಟ್ಟಲೆ ಖರ್ಚು ಮಾಡಿ ಹಾಗೆ ಬಿದ್ದಿವೆ. ಇದರ ಬಗ್ಗೆ ಅಧಿಕಾರಿಗಳು ಹಾಗೂ ಅಧ್ಯಕ್ಷರು ಇದರ ಬಗ್ಗೆ ಗಮನವಿಲ್ಲ ಒಂದು ಅಭಿವೃದ್ಧಿ ಕಾರ್ಯ ಯಾವುದೇ ಇಲ್ಲಾ ಇವರು ಏನು ಮಾಡುತ್ತಾರೆ.

ಎಂದು ಸಾರ್ವಜನಿಕರು ಪ್ರಶ್ನೆ ಆಗಿದೆ. ಹಾಗೂ ಯಲಗೋಡ ಗ್ರಾಮದ ಅಂಬೇಡ್ಕರ್ ಸರ್ಕಲ್ ಹತ್ತಿರ ಒಂದು ಶುದ್ಧ ನೀರು ಕುಡಿಯುವ ಘಟಕ ನಿರ್ಮಾಣವಾಗಿ ಏಳು ವರ್ಷವಾಗಿ ಆದರೆ ಅದಕ್ಕೆ ಉದ್ಘಾಟನೆ ಭಾಗ್ಯ ಯಾವಾಗ ಎಂದು ಸಾರ್ವಜನಿಕರು ಪ್ರಶ್ನೆ. ಗ್ರಾಮೀಣ ಜನರು ಶುದ್ಧ ನೀರು ಕುಡಿಯುವುದಕ್ಕೆ ಸರ್ಕಾರ ನಿರ್ಮಾಣ ಮಾಡಿದೆ ಅದನ್ನು ಸರಿಯಾದ ನೋಡಿ ಕೊಳ್ಳುವ ಕರ್ತವ್ಯ ಗ್ರಾಮ ಪಂಚಾಯತಿ ಇದೇ ಏಳು ಆದರೂ ಇನ್ನೂ ಚಲಾವಣೆಗೆ ಇಲ್ಲಾ. ಆ ಘಟಕದಲ್ಲಿ ಸಾಮಾನ್ಯಗಳು ಒಂದು ಇಲ್ಲ, ಹಂದಿಗಳು ಹಾಗೂ ನಾಯಿಗಳು ವಿಶ್ರಾಂತಿಯ ತಾಣವಾಗಿದೆ. ಪ್ರತಿದಿನ ಅಧಿಕಾರಿಗಳು ಗ್ರಾಮ ಪಂಚಾಯಿತಿಗೆ ಬರುವುದಿಲ್ಲಾ ಹಾಗಾಗಿ ಸಾರ್ವಜನಿಕರು ತುಂಬಾ ತೊಂದರೆ ಆಗಿದೆ ಎಂದು ಸಾರ್ವಜನಿಕರು ಹೇಳಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಭೀಮಪ್ಪ. ಹಚ್ಯಾಳ.ದೇವರ ಹಿಪ್ಪರಗಿ**

## ಸಾಮುವೇಲಪ್ಪನ ವಿರುದ್ಧ ದಲಿತ ಸಂಘರ್ಷ ಸಮಿತಿ–ಮುಖಂಡ ಸದಾನಂದ ಪನ್ನೂರು ಆಕ್ರೋಶ

**ಸಿಹಿ ಕಹಿ ಸುದ್ದಿ,**
**ಜಾಗೀರಪ್ಪನ್ನೂರು :** ಸರಕಾರ ಪ್ರತಿ ಐದು ವರ್ಷಕ್ಕೊಮ್ಮೆ ಆಡಳಿತ ನಡೆಸಿದರೂ ಸಹ ಮಾನ್ವಿ ತಾಲೂಕಿನ ಜಾಗೀರಪನ್ನೂರು ಗ್ರಾಮಕ್ಕೆ ರಸ್ತೆ ಸೌಲಭ್ಯ ಇಲ್ಲದ ಕಾರಣ ಬಸ್ ಸಂಚಾರವಂತೂ ಅಧೋಗತಿ ಅದರಲ್ಲೂ ರಸ್ತೆ ಸ್ಥಿತಿಯಂತೂ ಯಮರಾಯನಿಗೆ ಗೊತ್ತು.
ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಜಾಗೀರಪನ್ನೂರುಗ್ರಾಮದರಸ್ತೆಸರಿಯಿಲ್ಲದ ಕಾರಣ ರಸ್ತೆ ನಿರ್ಮಿಸಿಕೊಡಿ ಎಂದು ದಲಿತ ಸಂಘರ್ಷ ಸಮಿತಿ ಮುಖಂಡ ಸದಾನಂದ ಪನ್ನೂರು ಅವರು ಹೋರಾಟ ಮನವಿ




ಕೊಟ್ಟರು ಸಹ ಮಾನ್ವಿ ಲೋಕೋಪಯೋಗಿ ಇಲಾಖೆ ಜೆಇ ಸಾಮುವೇಲಪ್ಪನ ದುರಾಡಳಿತದಿಂದ ನಮಗೆ ನ್ಯಾಯ ಸಿಕ್ಕಿಲ್ಲ ಎಂದು ಸದಾನಂದ ಗಂಭೀರ ಆರೋಪ ಮಾಡಿದ್ದಾರೆ.
ಸಾಮುವೇಲಪ್ಪ ಸಾಹೇಬ್ರೆ ನೀವು ಶೋಷಿತ



ಸಮುದಾಯದಿಂದ ಬಂದವರು ನೀವು, ಆದರೆ ಶೋಷಿತ ಜನಾಂಗದ ಹೋರಾಟಗಾರರಿಗೆ ಸುಳ್ಳು ಹೇಳುತ್ತೀರಾ ಅಂದ ಮೇಲೆ ಇದು ಯಾವ ನ್ಯಾಯ ಸಾಮುವೇಲಪ್ಪಸಾಹೇಬ್ರೆ,ಜಾಗೀರಪನ್ನೂರು ಗ್ರಾಮದ ನಿವಾಸಿಗಳಂತೂ ಸಾಮುವೇಲಪ್ಪ ಸಾಹೇಬ್ರೆ ನಿಮಗೆ ಇಡೀ ಶಾಪ ಹಾಕುತ್ತಿದ್ದಾರೆ ಅಂದರೆ ನೀವೆ ಆಲೋಚನೆ ಮಾಡಿ ಆದಷ್ಟು ಬೇಗ ಸರಿ ಪಡಿಸಿದೆ ಇದ್ರೆ ಮುಂದೆ ಕಾದಿದೆ ಮಾರಿಹಬ್ಬ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಯುವಕರಲ್ಲಿ ರಕ್ತದಾನದ ಕುರಿತು ಜಾಗೃತಿ ಅಗತ್ಯ

**ಬನಹಟ್ಟಿ :** ರಕ್ತದಾನದಿಂದ ಪ್ರತಿಯೊಬ್ಬರು ಸಮಾಜ ಸೇವೆ ಮಾಡಲು ಸಾಧ್ಯ. ರಕ್ತದಾನದಿಂದ ದಾನಿಗಳು ಮತ್ತೊಬ್ಬರ ಜೀವವನ್ನು ಉಳಿಸಲು ಸಾಧ್ಯವಾಗುತ್ತದೆ. ಯುವಕರಲ್ಲಿ ರಕ್ತದಾನದ ಕುರಿತು ಜಾಗೃತಿ ಮುಖ್ಯವಾಗಿದೆ ಎಂದು ಇಲ್ಲಿನ ಮಾಹೇಶ್ವರಿ ಸೇವಾ ಸಂಘದ ಅಧ್ಯಕ್ಷ ಗೋಪಾಲ ಲಡ್ಡಾ ತಿಳಿಸಿದರು.
ಅವರು ಭಾನುವಾರ ಸ್ಥಳೀಯ ಬಂಗಾರೆವ್ವ ತಟ್ಟಿಮನಿ ಸಭಾ ಭವನದಲ್ಲಿ ಮಾಹೇಶ್ವರಿ ಸೇವಾಸಂಘದವರುಹಮ್ಮಿಕೊಂಡರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.
ಮುಧೋಳದ ರಾಮನಗೌಡ ಆಸ್ಪತ್ರೆಯ ಬ್ಲಡ್ ಬ್ಯಾಂಕಿನ ಡಾ.ಮಹಾದೇವ ಪೂಜಾರಿ



ಮಾತನಾಡಿ, ರಕ್ತವನ್ನು ಕೃತಕವಾಗಿ ನಿರ್ಮಾಣ ಮಾಡಲು ಸಾಧ್ಯವಿಲ್ಲ. ಆದ್ದರಿಂದ ದಾನಿಗಳಿಂದ ರಕ್ತವನ್ನು ಪಡೆದುಕೊಳ್ಳಲಾಗುತ್ತದೆ. 18 ರಿಂದ 60 ವರ್ಷದ ಪ್ರತಿಯೊಬ್ಬ ಆರೋಗ್ಯವಂತ ಸದೃಢ ವ್ಯಕ್ತಿಗಳು ರಕ್ತದಾನವನ್ನು ಮಾಡಬಹುದಾಗಿದೆ. ಪ್ರತಿಫಲದ ಅಪೇಕ್ಷೆ ಇಲ್ಲದೆ ಮಾನವೀಯತೆಯ ದೃಷ್ಠಿಯಿಂದ ಬೇರೆಯವರಿಗೆ ರಕ್ತ ನೀಡುವುದೆ ಮಹತ್ತರ ದಾನವಾಗಿದೆ. ಮಹೇಶ್ವರಿ ಸಮಾಜದ ಯುವಕರು ಪ್ರತಿ ವರ್ಷ ರಕ್ತದಾನವನ್ನು ಮಾಡುವ ಮೂಲಕ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ ಎಂದು ತಿಳಿಸಿದರು.
ಈ ಸಂದರ್ಭದಲ್ಲಿ ಪಂಕಜ ತೊತ್ಲಾ, ಶಾಮ ಭೂತಡಾ, ಗೋಪಾಲ ಭಟ್ಟಡ, ಬದರಿ ಲಡ್ಡಾ, ಗೋವಿಂದ ಕಾಬ್ರಾ, ರಾಜು ಮರ್ದಾ, ವಿಜಯ ರಾಠಿ, ಶ್ರೀನಾಥ ರಾಠಿ, ನಟವರ ಲೋಯಾ, ವಿಜಯ ಕಾಬ್ರಾ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ಕ್ರೀಡಾಮತ್ತುಸಾಂಸ್ಕೃತಿಕಚಟುವಟಿಕೆಗಳಕಾರ್ಯಕ್ರಮ ಗುಣಾತ್ಮಕ ಶಿಕ್ಷಣದ ಜತೆಗೆ ಸಂಸ್ಕಾರ ನೀಡಿ– ಶರಣಬಸವ ದೇವರು

**ತೇರದಾಳ :** ಶಿಕ್ಷಣ ಸಂಸ್ಥೆ ಎಂದರೆ ಸಮಾಜಕ್ಕೆ ಉತ್ತಮ ನಾಗ–ರಿಕರನ್ನು ನೀಡುವ ಬಹುದೊಡ್ಡ ಕಾಯಕವಾಗಿದೆ. ಮಕ್ಕಳು ಈ ನಾಡಿನ ಉತ್ತಮ ಪ್ರಜೆಗಳಾಗಬೇಕಾದರೆ ಗುಣಾತ್ಮಕ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ ನೀಡುವ ಕೆಲಸ ನಡೆಯಬೇಕೆಂದು ಹಳಿಂಗಳಿ ಕಮ–ರಿಮಠದ ಶರಣಬಸವ ದೇವರು ಹೇಳಿದರು.



ಇಲ್ಲಿನ ಸಿದ್ಧೇಶ್ವರ ವಿದ್ಯಾವರ್ಧಕ ಸಂಘದ ಸಿದ್ಧೇಶ್ವರ ಪ್ರಾಥ–ಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪ್ರಸಕ್ತ ಸಾಲಿನ ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ, ಅಕ್ಷರಭ್ಯಾಸ ಹಾಗೂ ಸೇವಾ ನಿವೃತ್ತಿ ಹೊಂದಿದ ನಿಕಟಪೂರ್ವ ಮುಖ್ಯ ಗುರುಮಾತೆ ಬಿ. ಜಿ. ಮುದಕನ್ನವರ ಅವರಿಗೆ ಸನ್ಮಾನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು.
ಶೈಕ್ಷಣಿಕ ಕ್ಷೇತ್ರದಲ್ಲಿ ಕೂಡ ಪೈಪೋಟಿ ನಡೆಯುತ್ತಿರುವುದು ಹೆಮ್ಮೆಯ ಸಂಗತಿ.
ಆದರೆ ಶಿಕ್ಷಣ ಸಂಸ್ಥೆಗಳು ವ್ಯಾಪಾರ ಕೇಂದ್ರಗಳಾಗದೆ ಸೇವಾ ಮನೋಭಾವ ಹೊಂದಿರಬೇಕೆಂದು ಹೇಳಿದರು. ತೇರದಾಳ ಪೊಲೀಸ್ ಠಾಣೆಗೆ ಹೊಸದಾಗಿ ನಿಯುಕ್ತರಾಗಿರುವ ಪಿಎಸ್ಐ ಶಿವಾನಂದ ಸಿಂಗನ್ನವರ ಮಾತನಾಡಿ, ಬದುಕಿನಲ್ಲಿ ಯಶಸ್ಸು ಹೊಂದಬೇಕಾದರೆ ಶಿಕ್ಷಣ ಬಹಳ ಮುಖ್ಯ. ಸಾಧನೆಯ ಕನಸಿನೊಂದಿಗೆ ಹೆಜ್ಜೆ ಹಾಕಿ. ಆವಾಗ ಸಾಧನೆಯ ದಾರಿ ಕಾಣುತ್ತದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಹಿರಿಯ ನಿರ್ದೇಶಕ ರಮೇಶ ಅವರಾದಿ ಮಾತನಾಡಿದರು. ಪ್ರಾಥಮಿಕ ವಿಭಾಗದ ಮುಖ್ಯಗುರುಗಳಾದ ಬಿ. ಟಿ. ಪತ್ತಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷ ಡಾ. ಶಂಕರ ಅಥಣಿ ಅಧ್ಯಕ್ಷತೆ ವಹಿಸಿದ್ದರು. ಚೇರಮನ್ ಮಹೇಶ ಯಾದವಾಡ, ಮಹೇಶ ಹಂಜಿ, ಕಾಶಿನಾಥ ತಳ್ಳಿ, ಸಿದ್ದು ಅಮ್ಮಣಗಿ, ಮಲ್ಲಪ್ಪ ಮುಕರಿ, ಪರಪ್ಪ ಕಾಲತಿಪ್ಪಿ, ಈರಪ್ಪ ಯಾದವಾಡ, ಆಡಳಿತಾಧಿಕಾರಿ ಎಂ. ಬಿ. ಮಾಳೇದ, ಶಂಕರ ಹೊಸಮನಿ, ಚನ್ನಮಲ್ಲ ಬಿಜ್ಜರಗಿ, ಶಂಕರ ಮಂಗಸೂಳಿ, ಪ್ರೌಢ ವಿಭಾಗದ ಮುಖ್ಯಗುರು ಡಿ. ಎ. ಉಗಾರ ಪಾಲ್ಗೊಂಡಿದ್ದರು.

## ಬಸವಾನಂದ ಪ್ರೌಢಶಾಲೆ 100 % ರಷ್ಟು ಫಲಿತಾಂಶ

**ಮಹಾಲಿಂಗಪುರ :** ಪಟ್ಟಣದ ಬಸವಾನಂದ ಪ್ರೌಢಶಾಲೆಯು 2024–25 ನೇ ಸಾಲಿನ ಎಸ್ಎಸ್ಎಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.100% ರಷ್ಟು ಫಲಿತಾಂಶ ಪಡೆದಿರುವ ಮುಧೋಳ ತಾಲ್ಲೂಕಿನ ಏಕೈಕ ಶಾಲೆಯಾಗಿದ್ದು,
ಶಾಲೆಯ ವಿದ್ಯಾರ್ಥಿನಿ ಸಾಹಿತ್ಯಾ ಟರ್ಕಿ 625 ಕ್ಕೆ 623 ಅಂಕಗಳೊಂದಿಗೆ ತಾಲ್ಲೂಕಿಗೆ ಪ್ರಥ–ಮ ಸ್ಥಾನ, ರಾಜ್ಯಕ್ಕೆ ನಾಲ್ಕನೇ ಸ್ಥಾನ ಪಡೆದ ಕಾರಣ ಇತ್ತೀಚೆಗೆ ಮುಧೋಳ ಸಾಹಿತ್ಯ ಪರಿಷತ್ತು ಭವನದಲ್ಲಿ
ಜರುಗಿದ ಮುಧೋಳ ತಾಲ್ಲೂಕಾ ಮುಖ್ಯೋಪಾಧ್ಯಾಯರ ಸಭೆಯಲ್ಲಿ ಬಸವಾನಂದ ಪ್ರೌಢಶಾಲೆಯ ಮುಖ್ಯಶಿಕ್ಷಕ ಸಿದ್ಧಾರೂಢ ಮುಗಳಖೋಡ



ಅವರನ್ನು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ ಸಿದ್ನಾಳ,
ಕ್ಷೇತ್ರ ಶಿಕ್ಷಣಾಧಿಕಾರಿ ಸಮೀರ ಮುಲ್ಲಾ ಅವರು ಸನ್ಮಾನಿಸಿ ಗೌರವಿಸಿದರು.
ತಾಲೂಕುಪಂಚಾಯತ್ಅಧಿಕಾರಿಉಮೇಶ ಸಿದ್ನಾಳ ಮಾತನಾಡಿ, ಬಸವಾನಂದ ಪ್ರೌಢ ಶಾಲೆಯಂತೆ ತಾಲ್ಲೂಕಿನ ಎಲ್ಲಾ ಶಿಕ್ಷಕರು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿದಾಗ ಮಾತ್ರ ತಾಲ್ಲೂಕಿನ ಶೈಕ್ಷಣಿಕ ಪ್ರಗತಿ ಸಾಧ್ಯ ಎಂದರು.
ಕ್ಷೇತ್ರ ಶಿಕ್ಷಣಾಧಿಕಾರಿ ಸಮೀರ ಮುಲ್ಲಾ ಮಾತನಾಡಿ, ಕಳೆದ ಹತ್ತೊಂಬತ್ತು ವರ್ಷಗಳಿಂದ ಬಸವಾನಂದ ಪ್ರೌಢ ಶಾಲೆಯು ನಿರಂತರವಾಗಿ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ನೂರಕ್ಕೆ ನೂರು ಫಲಿತಾಂಶ ಪಡೆದುಕೊಳ್ಳುತ್ತಿರುವದು ಹೆಮ್ಮೆಯ ಸಂಗತಿ. ಪ್ರತಿಯೊಂದು ಪ್ರೌಢ ಶಾಲೆಗಳ ಮುಖ್ಯಶಿಕ್ಷಕರು ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ನಿರಂತರವಾಗಿ ವಿವಿಧ ಚಟುವಟಿಕೆಗಳ ಮೂಲಕ ಕಾಳಜಿವಹಿಸಿ, ಎಸ್ಎಸ್ಎಲ್ಸಿ ಫಲಿತಾಂಶ ಸುಧಾರಣೆಗೆ ಕ್ರಮ ಕೈಗೊಳ್ಳಬೇಕು ಎಂದರು.
ಸಭೆಯಲ್ಲಿ ಮುಧೋಳ ತಾಲ್ಲೂಕಿನ ವಿವಿಧ ಪ್ರೌಢ ಶಾಲೆಗಳ ಶಿಕ್ಷಕರು ಭಾಗವಹಿಸಿದ್ದರು.

## ಗರ್ಭಿಣಿಯರಿಗೆ ಅವಧಿ ಮೀರಿದ ಆಹಾರ ಸಾಮಗ್ರಿ ವಿತರಣೆ
### ಮುಧೋಳ ಸಿಡಿಪಿಓ ಭೇಟಿ. ಕಾರ್ಯಕರ್ತೆ–ಸಹಾಯಕಿಗೆ ನೋಟಿಸ್ ಜಾರಿ

**ಮಹಾಲಿಂಗಪುರ :** ಪಟ್ಟಣದ ಬಸವ ನಗರ ವ್ಯಾಪ್ತಿಯ ಮಹಾಂತೇಶ ನಗರದ ಕಂಪೌಂಡ್ಗೆಹೊಂದಿಕೊಂಡಿರುವ ಅಂಗನವಾಡಿ ಕೇಂದ್ರದಲ್ಲಿ (102) ಅವಧಿ ಮುಗಿದಿರುವ ಆಹಾರ ಸಾಮಗ್ರಿಗಳನ್ನು ಗರ್ಭಿಣಿಯರಿಗೆ ವಿತರಿಸಿದ ಬಗ್ಗೆ ಗುರುತರವಾದ ಆಪಾದನೆ ಸಾರ್ವಜನಿಕ–ರಿಂದ ಕೇಳಿಬಂದಿತ್ತು. ಈ ಕುರಿತು ಧಡಲ್ ಬಾಜಿ ದಿನಪತ್ರಿಕೆಯು "ಅವಧಿ ಮೀರಿದ ಆಹಾರ ಪೊಟ್ಟಣ" ವಿತರಿಸಿದ ವರದಿಯನ್ನು ಪ್ರಕಟಿಸಿತ್ತು.



ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಪ್ರಭಾಕರ ಕವಿತಾಳ ಅವರ ಆದ–ೇಶದಂತೆ ಸೋಮವಾರ ಮುಧೋಳ ಸಿಡಿಪಿಓ ಶ್ರೀಮತಿ ಕೆ. ಜಿ. ಕೋರೆಗೋಳ ಸದರಿ ಅಂಗನವಾಡಿಗೆ ಭೇಟಿ ನೀಡಿ ಪರಿಶೀಲಿಸಿದರು.
ಈ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಅಂಗವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯ ಕಣ್ತಪ್ಪಿನಿಂದ ಓರ್ವ ಗರ್ಭಿಣಿ ಮಹಿಳೆಗೆ ಅವಧಿ ಮುಗಿದ ಆಹಾರ ವಿತರಿಸಿದ್ದು ಕಂಡು ಬಂದಿದೆ. ಅಂಗನವಾಡಿ ಕಾರ್ಯಕರ್ತೆ ಬಿಸ್ಮಿಲ್ಲಾ ಪೆಂಢಾರಿ, ಸಹಾಯಕಿ ಸಖ್ಖುಬಾಯಿ ರಾಠೋಡ ಅವರಿಗೆ ಈ ಕುರಿತು ನೋಟಿಸ್ ಜಾರಿ ಮಾಡಲಾಗಿದೆ. ಅವಧಿ ಮೀರಿದ ಆಹಾರ ಪದಾಥ–ರ್ಗಳ ಪೊಟ್ಟಣವನ್ನು ಹಿಂಪಡೆಯಲಾಗಿದೆ. ಅದರ ಮೊತ್ತವನ್ನು ಕಾರ್ಯಕರ್ತೆಯಿಂದ ವಸೂಲಿ ಮಾಡಿ ಇಲಾಖೆಗೆ ಭರಿಸಲಾಗುವುದು ಎಂದರು.
ಸೋಮವಾರ ಮಹಾಲಿಂಗಪುರಕ್ಕೆ ಭೇಟಿ ನೀಡಿ ಪರಿಶೀಲಿಸಿದ ಸಮಗ್ರ ವರದಿಯನ್ನು ಜಿಲ್ಲಾ ಉಪನಿರ್ದೇಶಕರಿಗೆ ಕಳುಹಿಸಲಾಗುವುದು ಎಂದು ಮುಧೋಳ ಸಿಡಿಪಿಓ ಶ್ರೀಮತಿ ಕೆ. ಜಿ. ಕೋರೆಗೋಳ ತಿಳಿಸಿದರು.

## ರಾಜ್ಯ ಮಟ್ಟದ ಸಮಾವೇಶ ಆಯೋಜನೆಗೆ ನಿರ್ಧಾರ

**ಜಮಖಂಡಿ :** ನಾಗರಿಕರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ನಾಗ–ರಿಕರಲ್ಲಿ ಅರಿವು, ಜಾಗೃತಿ ಮೂಡಿಸಲು ನಾಗರಿಕ ಹಿತರಕ್ಷಣಾ ವೇದಿಕೆಯ ರಾಜ್ಯ ಮಟ್ಟದ ಸಮಾವೇಶವನ್ನು ಜಮಖಂಡಿಂ–ಋಲ್ಲಿ ನಡೆಸುವ ಕುರಿತು ಸರ್ವಾನುಮತದ ನಿರ್ಣಯ ಕೈಗೊಳ್ಳಲಾಗಿದೆ.
ನಗರದ ಶಬರಿ ಸಾಗರ ಹೋಟೆಲ್ನಲ್ಲಿ ಭಾನುವಾರ ಸಂಜೆ ಜರುಗಿದ ಜಮಖ–ಂಡಿಯ ನಾಗರಿಕ ಹಿತರಕ್ಷಣಾ ಸಂಘದ ಇಪ್ಪತ್ತೊಂದನೇ ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.
ಶಿವಮೊಗ್ಗದಲ್ಲಿ ನಡೆದ ನಾಗರಿಕ ಹಿತರಕ್ಷಣಾ ವೇದಿಕೆಯ ರಾಜ್ಯ ಮಟ್ಟದ ಮೊದಲನೇ ಸಮಾವೇಶದ ಮಾದರಿಯಲ್ಲಿ ಈ ಸಮಾವೇಶ ಆಯೋಜಿಸಬೇಕು. ಅದಕ್ಕೂ



ಮೊದಲು ಶಿವಮೊಗ್ಗ ನಾಗರಿಕ ಹಿತರಕ್ಷಣಾ ವೇದಿಕೆಯಿಂದ ಮಾಹಿತಿ ಸಂಗ್ರಹಿಸಿ ಎರಡನೆಯ ರಾಜ್ಯ ಮಟ್ಟದ ಸಮಾವೇಶದ ರೂಪುರೇಷೆಗಳನ್ನು ಸಿದ್ಧಪಡಿಸಿಕೊಳ್ಳಲು ನಿರ್ಧರಿಸಲಾಯಿತು.
ಜಮಖಂಡಿಯ ನಾಗರಿಕ ಹಿತರಕ್ಷಣಾ ಸಂಘವನ್ನು ರಾಜ್ಯ ಸಂಘಟನೆಯೊಂದಿಗೆ ಸಂಯೋಜನೆ ಪಡೆಯಲು ಸಹ ನಿರ್ಧ–ರಿಸಲಾಗಿದ್ದು, ಈ ಕುರಿತು ಪತ್ರ ವ್ಯವಹಾರ ಮಾಡಲು ಸಂಘದ ಕಾರ್ಯದರ್ಶಿ ಅಶೋಕ ಕುಲ್ಹಳ್ಳಿಕರ ಅವರಿಗೆ ಸಂಪೂರ್ಣ ಅಧಿಕಾರ ನೀಡಿ ನಿರ್ಣಯ ಕೈಗೊಳ್ಳಲಾಯಿತು.
ಸಂದೀಪ ಆಪ್ಟೆ ಅವರು ಸಂಘದ ಹಿಂದಿನ ವರ್ಷದ ಲೆಕ್ಕ ಪರಿಶೋಧಕರ ವರದಿಯನ್ನು ಸಾದರ ಪಡಿಸಿ ಜಮಾ–ಖರ್ಚಿನ ಮಾಹಿತಿ ಸಲ್ಲಿಸಿ ಸಭೆಯ ಅನುಮೋದನೆ ಪಡೆದರು. ಸಂಘ ಈ ವರೆಗೆ ನಗರದ ಅಭಿವೃದ್ಧಿಗಾಗಿ ನಡೆಸಿದ ಹೋರಾಟದ ಬಗ್ಗೆ ಸಭೆಗೆ ಮಾಹಿತಿ ನೀಡಲಾಯಿತು.
ಸಂಘದ ಅಧ್ಯಕ್ಷ ಶ್ರೀಕಾಂತ ಮರೆಗುದ್ದಿ ಅಧ್ಯಕ್ಷತೆ ವಹಿಸಿದ್ದರು. ಜಿ. ಆರ್. ಅನಂತಪೂರ, ಕಾಡು ಮಾಳಿ, ವಿಜಯ ಧರ್ಮದಾಸಾನಿ, ನ್ಯಾಯವಾದಿ ರವೀಂದ್ರ ಡಿ. ಹಳಿಂಗಳಿ, ಅನಂತ ಜೋಶಿ,
ವಿಜಯ ಕಟಗಿ, ನಿಲೇಶ ಹಜಾರೆ, ಡಾ. ಟಿ. ಪಿ. ಗಿರಡ್ಡಿ, ಚಿದಾನಂದ ಚೆಟ್ಟೇರ ಇತರರು ಸಭೆಯಲ್ಲಿ ಪಾಲ್ಗೊಂಡು ಸಲಹೆ ಸೂಚನೆಗಳನ್ನು ನೀಡಿದರು.

## ಶಾಲಾ ಸಂಸತ್ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ



**ರಬಕವಿ :** ಸಮೀಪದ ಹೊಸೂರಿನ ಪದ್ಮಾವತಿ ಇಂಟ-ರನ್ಯಾಷನಲ್ ಶಾಲೆಯಲ್ಲಿ ಶಾಲಾ ಸಚಿವ ಸಂಪುಟದ ಪ್ರಮಾಣ ವಚನ ಹಾಗೂ ಶಾಲಾ ಸಾಂಸ್ಕೃತಿಕ ಚಟುವಟಿಕೆಗಳ ಸಮಾರಂಭ ಜರುಗಿತು.

ಹಲವಾರು ಚಟುವಟಿಕೆಗಳ ಮೂಲಕ ಎಲ್ಲರ ಗಮನ ಸೆಳೆಯಿತು. ಶಾಲೆಯ ನಿಯಮಗಳಿಗೆ ಅನುಸಾರ ವಿದ್ಯಾರ್ಥಿಗಳ ನಾಲ್ಕು ವಿಭಿನ್ನ ಗುಂಪುಗಳು ಬೇರೆ-ಬೇರೆ ಸಮವಸ್ತ್ರಗಳನ್ನು ಧರಿಸಿ ಸರ್ವರನ್ನು ಆಕರ್ಷಿಸಿದರು.

ನಂತರ ಬಂದ ಅತಿಥಿಗಳಿಂದ ಹಾಗೂ ಪ್ರಾಚಾರ್ಯರಿಂದ ಪ್ರತಿಜ್ಞಾವಿಧಿ ಸ್ವೀಕರಿಸಿದರು. ಅತಿಥಿಗಳಾಗಿ ಆಗಮಿಸಿದ ವಿನೋದ ಪತ್ತಾರ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಶಾಲೆಯ ನಿಯಮಗಳ ಪಾಲನೆ ಹಾಗೂ ಶಿಸ್ತಿನ ಬಗ್ಗೆ ತಿಳಿ ಹೇಳಿದರು.

ಪ್ರವೀಣ ಹಜಾರೆ, ಆಡಳಿತಾಧಿಕಾರಿಗಳಾದ ಭಾರತಿ ತಾಳಿಕೋಟಿ ಹಾಗೂ ಪ್ರಾಚಾರ್ಯರಾದ ಬಸವರಾಜ ಕಲಾದಗಿ ಉಪಸ್ಥಿತರಿದ್ದರು.

ಸಂಭ್ರಮ ಯರಗಾಣಿ ಮತ್ತು ಕುಮಾರಿ ಸಮೃದ್ಧಿ ಸವದಿ ನಿರೂಪಿಸಿದರು. ಕುಮಾರಿ ಸಿಂಚನಾ ಸತಾನಿ ಹಾಗೂ ಕುಮಾರಿ ಸಿಂಚನಾ ವಸ್ತ್ರದ ಸ್ವಾಗತಿಸಿದರು. ಕುಮಾರಿ ತನ್ವಿ ಹೊರಟ್ಟಿ ವಂದಿಸಿದರು.

## ಹೂವಿನ ಹಿಪ್ಪರಗಿ ಗ್ರಾಮ ಪಂಚಾಯಿತಿಗೆ ಬೀಗ ಹಾಕಿ ಪ್ರತಿಭಟನೆ

**ಹೂವಿನಹಿಪ್ಪರಗಿ:**ಪಟ್ಟಣದಹೂವಿನಹಿಪ್ಪರಗಿ ಗ್ರಾಮ ಪಂಚಾಯಿತಿ ಎದುರುಗಡೆ. ಪಟ್ಟಣದ ಯುವಕರು. ಸಂಘಟನೆ ಮುಖಂಡರು ಮತ್ತು. ಪಂಚಾಯತಿ ವ್ಯಾಪ್ತಿಯಲ್ಲಿ ಬರುವ. ಅಗಸಬಾಳ ಗ್ರಾಮದ ಯುವಕರು ಗ್ರಾಮಸ್ಥರು.ಗ್ರಾಮದ ಹಿರಿಯರು. ಕೂಡಿಕೊಂಡು ಪಂಚಾಯಿತಿ ಬೀಗ ಹಾಕಿ ಎದುರುಗಡೆ ಪ್ರತಿಭಟನೆ ಮಾಡಲಾಯಿತು.

ಅಗಸಬಾಳಗ್ರಾಮಸ್ಥರುಗ್ರಾಮಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸುಮಾರು ಸಲ ಗ್ರಾಮದಅಭಿವೃದ್ಧಿಬಗ್ಗೆಮತ್ತುವಿಶೇಷವಾಗಿ ಗ್ರಾಮದಲ್ಲಿ ಮಳೆ ಆದರೆ ಗ್ರಾಮದಲ್ಲಿರುವ



ಗ್ರಾಮಸ್ಥರಿಗೆ ಮತ್ತು ಸಾರ್ವಜನಿಕರಿಗೆ ತಿರುಗಾಡಲು ಸಾಕಷ್ಟು ಸಮಸ್ಯೆ ಉಂಟು. ಮತ್ತು ಸಾಕಷ್ಟು ಮುಖ್ಯರಸ್ತೆಗಳಲ್ಲಿ ರಾಡಿ ಕೂಡ ಆಗುತ್ತದೆ ಇದರ ಬಗ್ಗೆ ಸಾಕಷ್ಟು ಸಲ. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮನವಿ ನೀಡಲಾಯಿತು. ಮತ್ತು ತಾಲೂಕು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಕೂಡ ಮನವಿಯನ್ನು ನೀಡಲಾಯಿತು

ಅಧಿಕಾರಿಗಳು ಮನವಿಯನ್ನು. ನೋಡಿ ಆ ಕಡೆ ಗಮನಹರಿಸಲಿಲ್ಲ. ಗ್ರಾಮದಲ್ಲಿ ಇನ್ನೂ ಸಾಕಷ್ಟು ಅಭಿವೃದ್ಧಿ ಕುಂಠಿತವಾಗಿದೆ ಹಾಗಾಗಿ ಗ್ರಾಮಸ್ಥರು ಬೇಸರವಾಗಿ.

ಪಂಚಾಯತಿ ಎದುರುಗಡೆ ಸುಮಾರು ಸಮಯ ಪ್ರತಿಭಟನೆ ಮತ್ತು ಗ್ರಾಮದ ಕಷ್ಟವನ್ನು ಹಂಚಿಕೊಂಡರು ಪ್ರತಿಭಟನೆ ಮಾಡಲಾಯಿತು ಈ ಸಂದರ್ಭದಲ್ಲಿ. ಉಮೇಶ್ ನಡುವಿನಮನಿ. ದಲಿತ ಮುಖಂಡರು ಹೋರಾಟಗಾರರು. ಸಿದ್ದು ಮೇಟಿ ಕರವೇ. ಅಧ್ಯಕ್ಷರು.

ಶಿವರಾಯ ಎತ್ತಿನಮನಿ ಈರಣ್ಣ ಬ್ಯಾಕೋಡ ಕುಮಾರ ಅಂಗಡಗೇರಿ ಅಬ್ಬಾಸಲಿ ಮುಜಾವಾರ

ಮಹಾದೇವಪ್ಪ ಸಣ್ಣತಂಗಿ. ಇನ್ನು ಅನೇಕ ಜನ ಗ್ರಾಮಸ್ಥರು ಪಟ್ಟಣದ ಯುವಕರು ಸೇರಿದಂತೆ ಹಲವಾರು ಜನ ಉಪಸ್ಥಿತರಿದ್ದರು.

# ಮೋದಿಯಿಂದಾಗಿ ದೇಶ ಸುರಕ್ಷಿತ

**ರಬಕವಿ-ಬನಹಟ್ಟಿ :** ಪ್ರಧಾನಿ ನರೇಂದ್ರ ಮೋದಿಯಿಂದಾಗಿ ದೇಶದ ಅಭಿವೃದ್ಧಿ ಮತ್ತು ಸುರಕ್ಷತೆ ಸಾಧ್ಯ. ಹನ್ನೊಂದು ವರ್ಷದಲ್ಲಿ ಮೋದಿ ದೇಶವನ್ನು ಅಭಿವೃದ್ಧಿ ಪಥದತ್ತ ತೆಗೆದುಕೊಂಡು ಹೋಗಿದ್ದಾರೆ. ಮೋದಿಯವರ ಯೋಜನೆಗಳನ್ನು ಬಿಜೆಪಿ ಕಾರ್ಯಕರ್ತರು ಮನೆ ಮನೆಗೆ ಮುಟ್ಟಿಸುವ ಕಾರ್ಯವನ್ನು ಮಾಡಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಶನಿವಾರ ಭಾರತೀಯ ಜನತಾ ಪಕ್ಷದ ಕಾರ್ಯಾಲಯದಲ್ಲಿ ಮೋದಿ ಸರ್ಕಾರಕ್ಕೆ ಹನ್ನೊಂದು ವರ್ಷ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತ ಮಾತೆಯೇ ನಮಗೆ ನಿಜವಾದ ದೇವರು. ಭಾರತ ಉಳಿದರೆ ಮಾತ್ರ ದೇಶದಲ್ಲಿ ಧರ್ಮ, ದೇವರು, ಸಂಸ್ಕೃತಿ ಉಳಿಯಲು ಸಾಧ್ಯ. ಪಕ್ಷ ದ್ರೋಹಿ ಕಾರ್ಯ ಬೇಡ. ದೇಶದಲ್ಲಿ ಇಂದು ವಂದೇ ಭಾರತ ರೈಲುಗಳು ಓಡಾಡುತ್ತಿವೆ. ಕಾರ್ಯಕರ್ತರು ಮನೆ ಮನೆಗೆ ಹೋಗಿ ಎಪ್ಪತ್ತು ವರ್ಷ ಮೇಲ್ಪಟ್ಟವರನ್ನು ಗುರುತಿಸಿ



ಅವರಿಗೆ ಆಯುಷ್ಮಾನ ಭಾರತ ಸೌಲಭ್ಯ ದೊರೆಯುವಂತೆ ಮಾಡಬೇಕು.

ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ನಮ್ಮ ಕಡೆಯಿಂದ ತೆರಿಗೆ ರೂಪದಲ್ಲಿ ಹಣವನ್ನು ಪಡೆದುಕೊಂಡು ಅದನ್ನು ಗ್ಯಾರಂಟಿಗಳ ಮೂಲಕ ಪುನಃ ನಮಗೇ ನೀಡುತ್ತಿದೆ. ರಾಜ್ಯದಲ್ಲಿ ಅಭಿವೃದ್ಧಿ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳು ಬರುತ್ತಿಲ್ಲ ಎಂದು ಸಿದ್ದು ಸವದಿ ತಿಳಿಸಿದರು.

ಬಿಜೆಪಿ ಮುಖಂಡ ಶಿವಾನಂದ ಗಾಯಕವಾಡ ಮಾತನಾಡಿ, ಮೂರು ಬಾರಿ ಗುಜರಾಥ್ ರಾಜ್ಯದ ಮುಖ್ಯಮಂತ್ರಿಗಳಾಗಿ ದೇಶ ಸೇವೆಗೆ ಹೋಗುತ್ತಿರುವಾಗ ತಾವು ಉಳಿಸಿದ ಹಣವನ್ನು ಸಮಾಜ ಸೇವೆಗೆ ನೀಡಿದರು. ಇಂದು ದೇಶದಲ್ಲಿ ವೈದ್ಯಕೀಯ ಕಾಲೇಜುಗಳು, ವಿಮಾನ ನಿಲ್ದಾಣಗಳು, ಅಮೃತ ಭಾರತ ರೇಲ್ವೆಗಳು, ಬಡವರಿಗಾಗಿ ಜನೌಷಧ ಕೇಂದ್ರಗಳು ಸೇರಿದಂತೆ ಮೂರು ನೂರಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ದೇಶದ ಅಭಿವೃದ್ಧಿಗಾಗಿ ದೇಶದ ಜನತೆಯ ಅಭಿವೃದ್ಧಿಗಾಗಿನೀಡಿದ್ದಾರೆ.ಅವೆಲ್ಲವುಗಳನ್ನು ಮನೆ ಮನೆಗೆ ತಲುಪಿಸುವ ಕಾರ್ಯವನ್ನು ಕಾರ್ಯಕರ್ತರು ಮಾಡಬೇಕು ಎಂದು ತಿಳಿಸಿದರು. ಜಿಲ್ಲಾ ಘಟಕದ ಉಪಾಧ್ಯಕ್ಷ ಈಶ್ವರ ಆದೆಪ್ಪನವರ ಮಾತನಾಡಿದರು.

ಈ ಸಂದರ್ಭದಲ್ಲಿ ಶ್ರೀಶೈಲ ಬೀಳಗಿ, ಸುರೇಶ ಅಕ್ಕಿವಾಟ, ಶಂಕ್ರೆಪ್ಪ ಭುಜರುಕ, ಜಯವಂತ ಮಿಳ್ಳಿ, ಶಂಕರಗೌಡ ಪಾಟೀಲ, ಪರಶುರಾಮ ಬಸವ್ವಗೋಳ, ಶಂಕರ ಹುನ್ನೂರ, ಪವಿತ್ರಾ ತುಕ್ಕನ್ನವರ, ವಿದ್ಯಾ ಧಬಾಡಿ, ಮಹಾನಂದ ಹೊರಟ್ಟಿ, ವೈಷ್ಣವಿ ಬಾಗೇವಾಡಿ, ಯಲ್ಲಪ್ಪ ಕಟಗಿ, ಶೇಖರ ಅಂಗಡಿ, ಗೌರಿ ಮಿಳ್ಳಿ, ದುರ್ಗವ್ವ ಹರಿಜನ, ಶಶಿಕಲಾ ಸಾರವಾಡ, ಜಯಶ್ರೀ ಬಾಗೇವಾಡಿ, ಮಹಾದೇವ ಕೋಟ್ಯಾಳ, ಭೀಮಶಿ ಪಾಟೀಲ, ಪ್ರಭು ಪೂಜಾರಿ, ಈರಣ್ಣ ಚಿಂಚಖಂಡಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಐವತ್ತನೆಯ ವರ್ಷದ ಸಂಭ್ರಮಾಚರಣೆಗೆ ಚಾಲನೆ



**ಬನಹಟ್ಟಿ :** ಐವತ್ತು ವರ್ಷಗಳ ಹಿಂದೆ ಇಲ್ಲಿ ಆರಂಭಗೊಂಡ ಪದವಿ ಮಹಾವಿದ್ಯಾಲಯ ರಬಕವಿ ಬನಹಟ್ಟಿ ಹಾಗೂ ಸುತ್ತ ಮುತ್ತಲಿನ ನಗರ ಮತ್ತು ಗ್ರಾಮೀಣ ಪ್ರದೇಶಗಳ ಬಡ ರೈತ ಮತ್ತು ನೇಕಾರ ಕುಟುಂಬಗಳ ನೂರಾರು ವಿದ್ಯಾರ್ಥಿಗಳಿಗೆ ವರದಾನವಾಗಿದೆ.

ಇಂದು ಕಾಲೇಜು ಆರಂಭವಾಗಿ ಐವತ್ತು ವರ್ಷಗಳು ಗತಿಸಿದವು. ಮುಂದಿನ ದಿನಗಳಲ್ಲಿ ಐವತ್ತನೆ ವರ್ಷದ ಸಂಭ್ರಮಚಾರಣೆಯನ್ನು ವಿಶೇಷವಾಗಿ ಹಮ್ಮಿಕೊಳ್ಳಲಾಗುವುದು ಎಂದು ಜನತಾ ಶಿಕ್ಷಣ ಸಂಘದ ಕಾರ್ಯಾಧ್ಯಕ್ಷ ಬಸವಂತ ಜಾಡಗೌಡ ತಿಳಿಸಿದರು.

ಅವರು ಸೋಮವಾರ ಇಲ್ಲಿನ ಎಸ್ ಟಿ ಸಿ ಕಾಲೇಜಿನ ಆವರಣದಲ್ಲಿರುವ ಜೆಎಸ್ಎಸ್ ಸಂಘದ ಸಂಸ್ಥಾಪಕ ತಮ್ಮಣ್ಣಪ್ಪ ಚಿಕ್ಕೋಡಿ ಕಾಲೇಜಿನ ಸುವರ್ಣ ಮಹೋತ್ಸವ ಸಂಭ್ರಮದ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಚಾಲನೆ ನೀಡಿದರು.

ಸಂಘದಗೌರವಕಾರ್ಯದರ್ಶಿಶಂಕರಸೋರಗಾಂವಿ ಮಾತನಾಡಿ, ಕನ್ನಡ ನಾಡು ನುಡಿಗಾಗಿ ಹೋರಾಡಿದ ಮಹಾನುಭಾವ ತಮ್ಮಣ್ಣಪ್ಪ ಚಿಕ್ಕೋಡಿಯವರು ಜೆ-ಎಸ್ಎಸ್ ಸಂಘದ ಸಂಸ್ಥಾಪಕರು. ಅವರ ಹೆಸರನ್ನು ಇಲ್ಲಿನ ಪದವಿ ಮಹಾವಿದ್ಯಾಲಯಕ್ಕೆ ಇಡಲಾಗಿದೆ. ಉತ್ತರ ಕರ್ನಾಟಕದಲ್ಲಿ ಅತ್ಯಂತ ಹಳೆಯದಾದ ಕಾಲೇಜುಗಳಲ್ಲಿ ಎಸ್ ಟಿ ಸಿ ಕಾಲೇಜು ಕೂಡಾ ಒಂದಾಗಿದೆ ಎಂದು ತಿಳಿಸಿದರು.

ಸಂಘದ ಉಪಾಧ್ಯಕ್ಷ ಬಸವರಾಜ ಭದ್ರನ್ನವರ, ನಿರ್ದೇಶಕರಾದ ಭೀಮಶಿ ಮಗದುಮ್, ಪಂಡಿತ ಹನಗಂಡಿ, ಮಲ್ಲಿಕಾರ್ಜುನ ಬಾಣಕಾರ, ವಿ. ಆರ್. ಕುಳ್ಳಿ, ಪ್ರಾಚಾರ್ಯ ಜಿ. ಆರ್. ಜುನ್ನಾಯ್ಕರ್, ಪ್ರಕಾಶ ಕೆಂಗನಾಳ, ಮನೋಹರ ಶಿರಹಟ್ಟಿ, ಗೀತಾ ಸಜ್ಜನ, ಎಸ್. ಬಿ. ಉಕ್ಕಲಿ, ಬಸವರಾಜ ತಳವಾರ, ರವಿ ಕುಳ್ಳಿ, ಶಿವು ಇಟ್ನಾಳ, ರತ್ನಾ ಗುಂಡಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಉತ್ತಮ ಶಿಕ್ಷಕಿ ಪ್ರಶಸ್ತಿ ಪ್ರದಾನ

**ಮಹಾಲಿಂಗಪುರ :** ಸಮೀಪದ ಸಮೀರವಾಡಿಯ ಕೆ. ಜೆ. ಸೋಮೈಯಾ ಆಂಗ್ಲ ಮಾಧ್ಯಮ ಶಾಲೆಯ ಪ್ರಾಚಾರ್ಯರ ಮಾರ್ಗದರ್ಶನದಲ್ಲಿ

ಕನ್ನಡ ಶಿಕ್ಷಕಿ ಶ್ರೀಮತಿ ಸುನಂದಾ ಚಂದ್ರಶೇಖರ ಗಡೆನ್ನವರ ಇವರು ಕಲಿಸಿದ ವಿದ್ಯಾರ್ಥಿಗಳು ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯಲ್ಲಿ ನೂರಕ್ಕೆ ನೂರು ಅಂಕಗಳನ್ನು ಗಳಿಸಿ, ಸಾಧನೆ ಮಾಡಿರುವ ಹಿನ್ನೆಲೆಯಲ್ಲಿ ಬೆಂಗಳೂರಿನ ಕರುನಾಡ ಕನ್ನಡ ಕಲಾಸಿರಿ ಬಳಗದ ವತಿಯಿಂದ ಉತ್ತಮ ಸಾಧಕ ಶಿಕ್ಷಕಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ.

ಸಂಘಟನೆಯ ರಾಜ್ಯಾಧ್ಯಕ್ಷ ಡಾ. ಅಂಬರೀಶ ಸಿ.ಎಂ., ಗೌರವಾಧ್ಯಕ್ಷ ಡಾ. ಟಿ. ಯಲ್ಲಪ್ಪ ಸೇರಿದಂತೆ ಇನ್ನೂ ಹಲವರು ಭಾಗವಹಿಸಿದ್ದರು.



## ವಿಚಾರ ಸಂಕಿರ್ಣದಲ್ಲಿ ಬಿಎಲ್.ಡಿ. ಇ. ವಿದ್ಯಾರ್ಥಿಗಳು ಭಾಗಿ




**ಜಮಖಂಡಿ :** ಬಾಗಲಕೋಟ ವಿಶ್ವವಿದ್ಯಾಲಯದ ವತಿಯಿಂದ ಬಳ್ಳಾರಿಯ ನಂದಿಹಳ್ಳಿಯಲ್ಲಿ ನಡೆದ ಡಾ. ಬಿ. ಆರ್. ಅಂಬೇಡ್ಕರ ಚಿಂತನೆಗಳು ಮತ್ತು 'ಪ್ರಸ್ತುತ ಭಾರತ' ವಿಷಯದ ಮೇಲೆ ಎರಡು ದಿನಗಳ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ

ಜಮಖಂಡಿಯ ಬಿ. ಎಲ್. ಡಿ. ಇ. ಶಿಕ್ಷಣ ಸಂಸ್ಥೆಯ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳಾದ ಸಂಗಮೇಶ ಪಾಟೀಲ ಮತ್ತು ಶ್ರುತಿ ಗುಡದಿ ಭಾಗವಹಿಸಿದ್ದರು.

ವಿದ್ಯಾರ್ಥಿಗಳ ವಿಶೇಷ ಸಾಧನೆಗೆ ಬಿ.ಎಲ್.ಡಿ.ಇ. ಸಂಸ್ಥೆಯ ಆಡಳಿತಾಧಿಕಾರಿ ಶ್ರೀಕಾಂತ ಲಗಳಿ, ಕಾಲೇಜಿನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಅರುಣಕುಮಾರ ಶಹಾ, ಪ್ರಾಂಶುಪಾಲ ಡಾ. ಡಿ. ಎಚ್. ಹುಸೇನಮಿಯಾ ಅಭಿನಂದಿಸಿದ್ದಾರೆ.

## ವೀರರಾಣಿ ಕಿತ್ತೂರು ರಾಣಿ ಚೆನ್ನಮ್ಮ ಭಾವಚಿತ್ರದ ಭವ್ಯ ಮೆರವಣಿಗೆ

**ತಾಳಿಕೋಟಿ :** ವೀರರಾಣಿ ಕಿತ್ತೂರ ಚೆನ್ನಮ್ಮಳ ಪುತ್ಥಳಿ ಸ್ಥಾಪನೆಯ ದ್ವಿತೀಯ ವಾರ್ಷಿಕೋತ್ಸವದ ಅಂಗವಾಗಿ ವೀರರಾಣಿ ಕಿತ್ತೂರು ಚೆನ್ನಮ್ಮ ಪುತ್ಥಳಿ ನಿರ್ಮಾಣ ಸಮಿತಿ ವತಿಯಿಂದ ಹಮ್ಮಿಕೊಂಡಿರುವ ಚೆನ್ನಮ್ಮಾಜಿ ಭಾವಚಿತ್ರದ ಭವ್ಯ ಮೆರವಣಿಗೆ ಶುಕ್ರವಾರ ವಿಜೃಂಭಣೆಯಿಂದ ಜರುಗಿತು. ಸಂಜೆ 5-00 ಘಂಟೆ ಪಟ್ಟಣದ ಚೆನ್ನಮ್ಮ ವೃತ್ತ ದಲ್ಲಿರುವ ಚೆನ್ನಮ್ಮಾಜಿಯ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ ಹೂಮಾಲೆ ಅರ್ಪಿಸಿ ಆರಂಭವಾದ ಮೆರವಣಿಗೆ ಕಾರ್ಯಕ್ರಮಕ್ಕೆ ನಾವದಗಿ ಬ್ರಹನ್ಮಠದ ಷ.ಬ್ರ. ರಾಜಗುರು ರಾಜೇಂದ್ರ ಒಡೆ-ಯರ್ ಶಿವಾಚಾರ್ಯರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು




ಕಿತ್ತೂರಿನ ವೀರರಾಣಿ ಚೆನ್ನಮ್ಮ ಶೌರ್ಯ ಮತ್ತು ಸ್ವಾಭಿಮಾನದ ಪ್ರತೀಕವಾಗಿದ್ದಾಳೆ ಕಿತ್ತೂರು ನೋಡನ್ನು ಉಳಿಸಿಕೊಳ್ಳಲು ಬ್ರಿಟಿಷರ ವಿರುದ್ಧ ಹೋರಾಡಿದ ಪ್ರಥಮ ಮಹಿಳೆ.

ಅವಳ ಬದುಕಿನ ಆದರ್ಶಗಳು ನಮಗೆಲ್ಲರಿಗೂ ಮಾದರಿ ಆಗಬೇಕಾಗಿದೆ, ಅವಳ ಪುತ್ಥಳಿ ಪ್ರತಿಷ್ಠಾನದ ದ್ವಿತೀಯ ವಾರ್ಷಿಕೋತ್ಸವ ಆಚರಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ ಎಂದರು.

ಮೆರವಣಿಗೆ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಜ್ಯೋತಿಷ್ಯ ರತ್ನ ಪರಮ ಪೂಜ್ಯ ರಾಮಲಿಂಗಯ್ಯ ಮಹಾಸ್ವಾಮಿಗಳು ವಹಿಸಿದ್ದರು. ಹಿಕ್ಕನಗುತ್ತಿ ಲಿಂಗಾಯತ ಮಹಾಮಠದ ಪೂಜ್ಯ ಪ್ರಭುಲಿಂಗ ಶರಣರು ನೇತೃತ್ವ ವಹಿಸಿದ್ದರು. ಕಿತ್ತೂರು ಚೆನ್ನಮ್ಮ ಸರ್ಕಲ್ ದಿಂದ ಸಕಲವಾದ್ಯ ಮೇಳ ಹಾಗೂ ಜಯ ಘೋಷಗಳೊಂದಿಗೆ ಆರಂಭವಾದ ಮೆರವಣಿಗೆಯು ಶ್ರೀ ಬಸವೇಶ್ವರ ವೃತ್ತ, ಮಹಾರಾಣಾ ಪ್ರತಾಪ್ ಸಿಂಹ ವೃತ್ತ, ಶಿವಾಜಿ ವೃತ್ತ, ಕತ್ರಿ ಬಜಾರ್ ಮಾರ್ಗವಾಗಿ ರಾಜವಾಡೆಗೆ ತಲುಪಿ ನಂತರ ಅಲ್ಲಿ ಧರ್ಮಸಭೆ ಜರುಗಿತು. ಮೆರವಣಿಗೆಯಲ್ಲಿ ವೀರರಾಣಿ ಕಿತ್ತೂರ ಚೆನ್ನಮ್ಮ ಪುತ್ಥಳಿ ನಿರ್ಮಾಣ ಸಮಿತಿಯ ಗೌರವಾಧ್ಯಕ್ಷರಾದ ಚಂದ್ರಶೇಖರ ಪಾಟೀಲ,ಅಧ್ಯಕ್ಷೆ ನೀಲಮ್ಮ ಎಸ್.ಪಾಟೀಲ,ಉಪಾಧ್ಯಕ್ಷ ಕಲ್ಲಪ್ಪ ಪಾಟೀಲ,ಪ್ರಧಾನ ಕಾರ್ಯದರ್ಶಿ ಎಂ.ಬಿ.ಕೋಟಿ, ಕಾರ್ಯದರ್ಶಿ ಬಿ.ಕೆ.ಪಾಟೀಲ, ವಚನ ಸಾಹಿತ್ಯ ಸಮಿತಿಯ ಅಧ್ಯಕ್ಷ ಮಹಾಂತೇಶ ಮುರಾಳ, ಅಶೋಕ ಚಿನಗುಡಿ, ವಿಶ್ವನಾಥ ಪಾಟೀಲ,ಸಮಾಜದ ಗಣ್ಯರು ಹಿರಿಯರು ಹಾಗೂ ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಇದ್ದರು.

## ವಿಶ್ವಕರ್ಮ ಸಮಾಜದ ಅಧ್ಯಕ್ಷರಾಗಿ ಅರವಿಂದ ಪತ್ತಾರ

**ಬನಹಟ್ಟಿ :** ಇಲ್ಲಿನ ವಿಶ್ವಕರ್ಮ ಸಮಾಜದ ಅರವಿಂದ ಪತ್ತಾರ ಬಾಗಲಕೋಟೆ ಜಿಲ್ಲೆಯ ವಿಶ್ವಕರ್ಮ ಸಮಾಜ ಘಟಕದ ಅಧ್ಯಕ್ಷರಾಗಿ ಮತ್ತು ಕರ್ನಾಟಕ ರಾಜ್ಯ ವಿಶ್ವಕರ್ಮ ಸಮಾಜದ



ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಜರುಗಿದ ರಾಜ್ಯ ಮಟ್ಟದ ವಿಶ್ವಕರ್ಮ ಸಮಾಜದ ಸಭೆಯಲ್ಲಿ ಅರವಿಂದ ಪತ್ತಾರ ಅವರನ್ನು ಆಯ್ಕೆ ಮಾಡಲಾಯಿತು.

## ಗ್ರಾಹಕರ ಹಕ್ಕುಗಳ ಬಗ್ಗೆ ಜಾಗೃತಿ ಅವಶ್ಯ: ಡಾ. ವೀಣಾ ದೀಕ್ಷಿತ್

**ಬಾಗಲಕೋಟೆ :** ಗ್ರಾಹಕರು ತಮ್ಮ ಹಕ್ಕುಗಳನ್ನು ಅರಿತುಕೊಳ್ಳುವುದು ಹಾಗೂ ಸಂಘಟಿತರಾಗುವುದು ಇಂದು ಅತ್ಯಂತ ಅಗತ್ಯವಾಗಿದೆ ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ನ ಮಹಿಳಾ ಅಧಿಕಾರಿ ಹಾಗೂವೀಕ್ಷಕರಾಗಿಆಗಮಿಸಿದ್ದಡಾ.ವೀಣಾ ದೀಕ್ಷಿತ್ ಹೇಳಿದರು. ಅವರು ರವಿವಾರ ನಗರದ ಸಮೃದ್ಧಿ ಗುರುಕುಲ ಹಾಗೂ ಅಖಿಲ ಭಾರತೀಯ ಗ್ರಾಹಕ ಪಂಚಾಯತ್, ಕರ್ನಾಟಕ ಪ್ರಾಂತ ಬಾಗಲಕೋಟೆ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಲಾಗಿದ್ದ ಜಿಲ್ಲಾ ಗ್ರಾಹಕರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು. ಗ್ರಾಹಕರು ತಮ್ಮ ಹಕ್ಕುಗಳ ಅರಿವಿನಿಂದ ವ್ಯಾಪಾರ ವ್ಯವಹಾರಗಳಲ್ಲಿ ನಡೆಯುವ ಮೋಸ ಮತ್ತು ವಂಚನೆಗಳನ್ನು ತಡೆಗಟ್ಟುವ ದಿಕ್ಕಿನಲ್ಲಿ ಚಿಂತನೆ ಮಾಡಬೇಕು ಹಾಗೂ ಸಮಾಜದಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದರು. ಅಖಿಲ ಭಾರತೀಯ ಗ್ರಾಹಕ ಪಂಚಾಯತ್




ಕರ್ನಾಟಕ ಪ್ರಾಂತದ ಕಾರ್ಯದರ್ಶಿ ಶ್ರೀಮತಿ ಗಾಯತ್ರಿ ಮಾತನಾಡಿ, "ಸಮಾಜದ ಪ್ರತಿಯೊಬ್ಬರೂ ಒಗ್ಗಟ್ಟಿನಿಂದ ಮುಂದೆ ಬಂದು ಗ್ರಾಹಕರ ಮೋಸ, ವಂಚನೆಗಳನ್ನು ತಡೆಗಟ್ಟುವಲ್ಲಿ ಪಾತ್ರವಹಿಸಬೇಕು" ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಬಾಗಲಕೋಟೆ ಜಿಲ್ಲಾ ಗ್ರಾಹಕ ಪಂಚಾಯತ್ನ ನೂತನ ಕಾರ್ಯಕಾರಿ ಮಂಡಳಿಯ ಘೋಷಣೆಯೂ ನಡೆಯಿತು. ಸಭೆಗೆ ಅಧ್ಯಕ್ಷತೆ ವಹಿಸಿದ್ದ ಸಮೃದ್ಧಿ ಗುರುಕುಲದ ಗೌರವ ಕಾರ್ಯದರ್ಶಿ ಬಿ. ಎನ್. ಪಾಟೀಲ ಅವರು ಮಾತನಾಡಿ, "ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ನ ಕಾರ್ಯಗಳಿಗೆ ಸಾರ್ವಜನಿಕರು ಸಹಕರಿಸಬೇಕು. ಗ್ರಾಹಕ ವಂಚನೆ ರಹಿತ, ನೈತಿಕ ಮೌಲ್ಯಗಳ ಸಮಾಜ ನಿರ್ಮಾಣಕ್ಕೆ ಇದು ಸಹಾಯಕವಾಗುತ್ತದೆ" ಎಂದು ಹೇಳಿದರು. ಹಳೆಯ ಕಾರ್ಯಗಳ ಕುರಿತ ವರದಿಯನ್ನು ರಂಗನಗೌಡ ದಂಡನ್ನವರ ಹಾಗೂ ಡಾ. ಮಹಾದೇವ ದೀಕ್ಷಿತ್ ಮಂಡಿಸಿದರು. ಕಾರ್ಯಕ್ರಮದಲ್ಲಿ ನ್ಯಾಯವಾದಿ ಜಯತೀರ್ಥ ಕುಲಕರ್ಣಿ, ನಿವೃತ್ತ ಪ್ರಾಚಾರ್ಯ ಜಿ. ಎನ್. ಕುಲಕರ್ಣಿ, ಶ್ರೀಕಾಂತ ಕುಲಕರ್ಣಿ, ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯ ಚಂದ್ರಿಕಾ ಕುರಂದವಾಡ, ಪಾರ್ವತಿ ಜೈನಕೇರಿ, ಅಕ್ಕಮ್ಮಾ ಜಿಗಳೂರ, ಲತಾಶ್ರೀ ಶೀಲವಂತರ, ಅನ್ನಪೂರ್ಣ ಜತ್ತಿ, ವೀಣಾ ಜಿಗಳೂರ, ಶಾಲಾ ಶಿಕ್ಷಕರು ಸೇ-ರಿದಂತೆ ಹಲವರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರೊ. ಎ. ಬಿ. ಶಿದ್ದನಗೌಡ ಸ್ವಾಗತಿಸಿ, ಗಾಯತ್ರಿ ನಾಡಿಗ ವಂದನೆ ಸಲ್ಲಿಸಿದರು. ನಿರೂಪಣೆಯನ್ನು ಪಾರ್ವತಿ ಜೈನಕೇರಿ ನೆರವೇರಿಸಿದರು.

## ರಕ್ತದಾನ ಶಿಬಿರ




**ಬಾಗಲಕೋಟೆ :** ವಿಶ್ವ ರಕ್ತದಾನಿಗಳ ದಿನದಂದು ನಮ್ಮ ಬಿ.ವ್ಹಿ.ವ್ಹಿ.ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ, ಬಾಗಲಕೋಟನಲ್ಲಿ ಎಸ್.ಎನ್.ವೈದ್ಯಕೀಯಮಹಾವಿದ್ಯಾಲಯನವನಗರ ಬಾಗಲಕೋಟ ಇವರ ಸಹಯೋಗದೊಂದಿಗೆ ವಿಶ್ವರಕ್ತದಾನಿಗಳ ದಿನದಂದು ರಕ್ತದಾನ ಶಿಬಿರವನ್ನು ದಿನಾಂಕ:14-06-2025 ರಂದು ಹಮ್ಮಿಕೊಳ್ಳಲಾಗಿ-ತ್ತು. ಈ ಶಿಬಿರದಲ್ಲಿ 44 ಕ್ಕೂ ಹೆಚ್ಚಿನ ಜನರುರಕ್ತದಾನ ಮಾಡಿ ಶಿಬಿರವನ್ನು ಯಶಸ್ವಿಗೊಳಿಸಿದರು. ಈ ಶಿಬಿರದಲ್ಲಿ ನಮ್ಮ ಮಹಾವಿದ್ಯಾಲಯದ ಆಡಳಿತ ಮಂಡಳಿ ಕಾರ್ಯಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಎಸ್.ಸಾಸನೂರಅವರುಶಿಬಿರವನ್ನುಉದ್ಘಾಟಿಸಿದರು. ಸದರಿ ಶಿಬಿರದಲ್ಲಿ ಮಹಾವಿದ್ಯಾಲಯದ ಪ್ರಭಾರಿ ಪ್ರಾಚಾರ್ಯರಾದ ಡಾ. ಮಲ್ಲಿಕಾರ್ಜುನ ಎಸ್. ಹಿರೇಮಠ ಹಾಗೂ ಎನ್.ಎಸ್.ಎಸ್. ಕಾರ್ಯಕ್ರಮದ ಅಧಿಕಾರಿಯಾದ ಡಾ. ಶಶಿಧರ ಎಸ್. ಸಾರವಾಡ, ಹಾಗೂ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿಗಳು ಪಾಲ್ಗೊಂಡು ಶಿಬಿರವನ್ನು ಯಶಸ್ವಿಗೊಳಿಸಿದರು.

## ಪದವಿ ಪ್ರಥಮ ವರ್ಷದ ಕೋರ್ಸಗಳ ಪ್ರವೇಶದ ಅವಧಿ ವಿಸ್ತರಣೆ

**ಬಾಗಲಕೋಟೆ:**ಬಾಗಲಕೋಟೆನವನಗರದ ಸೆಕ್ಟರ್ ನಂಬರ್ 43 ರಲ್ಲಿರುವ ನ್ಯಾಕ್ ಬಿ+ ಮಾನ್ಯತೆ ಪಡೆದಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಸಕ್ತ 2025-26 ನೇ ಶೈಕ್ಷಣಿಕ ಸಾಲಿನ ಖಇಕ ಅಡಿಯಲ್ಲಿ 3 ವರ್ಷದ ಪದವಿ ಪ್ರಥಮ ವರ್ಷದ ಕೋರ್ಸಗಳ ಪ್ರವೇಶಕ್ಕೆ 16/6/2025 ರಂದು ಕೊನೆಯ ದಿನವಾಗಿತ್ತು.

ಈಗ ಜಮಂಡಿಯಲ್ಲಿರುವ ಬಾಗಲಕೋಟೆ ವಿಶ್ವವಿದ್ಯಾಲಯವು ಪ್ರಸಕ್ತ ಸಾಲಿನ ಪದವಿ ಪ್ರಥಮ ವರ್ಷದ ಕೋರ್ಸಗಳ ಪ್ರವೇಶ ಪಡೆಯುವ ದಿನಾಂಕವನ್ನು 30 ಜೂನ್ 2025 ರವರೆಗೆ ವಿಸ್ತರಣೆ ಮಾಡಿದ್ದಾರೆ. ಪದವಿ ಪ್ರಥ-'ಮ ವರ್ಷದಲ್ಲಿ ಬಿ.ಎ, ಬಿ.ಕಾಂ, ಬಿ.ಎಸ್ಸಿ, ಬಿ.ಬಿ.ಎ ಕೋರ್ಸಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆಯಬೇಕೆಂದು ಪ್ರಾಚಾರ್ಯರಾದ ಡಾ.ಅರುಣಕುಮಾರ ಗಾಳಿ ಅವರು ಪತ್ರಿಕಾ ಪ್ರಕಟನೆಗೆ ತಿಳಿಸಿದ್ದಾರೆ.

ಹೆಚ್ಚಿನ ವಿವರಗಳಿಗಾಗಿ ಪ್ರಾಚಾರ್ಯ ಡಾ.ಅರುಣಕುಮಾರ ಗಾಳಿ ಮೊಬೈಲ್ ನಂಬರ್ 9738731675 ಇದಕ್ಕೆ ಸಂಪರ್ಕಿಸಲು ತಿಳಿಸಿದ್ದಾರೆ.

# ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಜನ ಜಾಗೃತಿ ಮೂಡಿಸಬೇಕಿದೆ: ಡಿಸಿ ನಲಿನ್ ಅತುಲ್



**ಕೊಪ್ಪಳ :** ಮಕ್ಕಳೇ ದೇಶದ ಭವಿಷ್ಯದ ಪ್ರಜೆಗಳಾಗಿರುವುದರಿಂದ ಅವರ ಸರ್ವತೋಮುಖಅಭಿವೃದ್ಧಿಗೆಪೂರಕವಾಗಿ ನಮ್ಮ ಸಮಾಜವನ್ನು ರೂಪಿಸಬೇಕು. ಸಮಾಜದ ಅನಿಷ್ಟ ಪದ್ಧತಿಯಾದ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಜನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಈ ಕುರಿತು ಜನರಿಗೆ ತಿಳಿ ಹೇಳಬೇಕಿದೆ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಹೇಳಿದರು.

ಜಿಲ್ಲಾ ಪಂಚಾಯತ್‌ನ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ, ಜಿಲ್ಲಾ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಯುನಿಸೆಫ್ ಮಕ್ಕಳ ರಕ್ಷಣಾ ಯೋಜನೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸಂಘ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಹಾಗೂ ಕಾನೂನು ಅರಿವು-ನೆರವು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಹೊಸದಾಗಿ ಶಿಕ್ಷಣ ಹಕ್ಕು ಕಾಯ್ದೆ ಪ್ರಕಾರ ಮಕ್ಕಳಿಗೆ ಉಚಿತ ಶಿಕ್ಷಣ ನೀಡಬೇಕು. ನಮ್ಮ ಭಾಗದಲ್ಲಿ ಕೃಷಿ, ಹೋಟೆಲ್, ಗ್ಯಾರೇಜ್, ಆರೋಗ್ಯ ಕ್ಷೇತ್ರ ಸೇರಿದಂತೆ ಹಲವಾರು ಕಡೆಗಳಲ್ಲಿ ಬಾಲಕಾರ್ಮಿಕ ಮಕ್ಕಳು ಕಂಡುಬರುತ್ತಾರೆ. ಬಾಲಕಾರ್ಮಿಕರನ್ನು ದುಡಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ. ಪಾಲಕರು ತಮ್ಮ ಮಕ್ಕಳನ್ನು ಬಾಲಕಾರ್ಮಿಕರನ್ನಾಗಿ ಮಾಡಬಾರದು. ಇದರಿಂದ ಅವರ ಬಾಲ್ಯವನ್ನು ಕಸಿದುಕೊಂಡಂತಾಗುತ್ತದೆ. ದೇಶದ ಭವಿಷ್ಯವಾದ ಮಕ್ಕಳ ವ್ಯಕ್ತಿತ್ವ ಅಭಿವೃದ್ಧಿಗೆ ಪೂರಕವಾಗುವಂತೆ ನಮ್ಮ ಸಮಾಜವನ್ನು ರೂಪಿಸಬೇಕು ಎಂದು ಹೇಳಿದರು.

ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಪತ್ತೆಯಾದ 62 ಬಾಲಕಾರ್ಮಿಕ ಪ್ರಕರಣಗಳಲ್ಲಿ 13 ಬಾಲಕಾರ್ಮಿಕರ ಪ್ರಕರಣಗಳಿಗೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಇಂತಹ ಘಟನೆಗಳು ನಡೆಯದಂತೆಕಾರ್ಮಿಕಇಲಾಖೆಸೇರಿದಂತೆ ಇತರೆ ಸಂಬಂಧಿಸಿದ ಇಲಾಖೆಯ ಅಧಿಕಾ-ರಿಗಳು ಮುಂಜಾಗ್ರತೆ ವಹಿಸಬೇಕೆಂದು ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ. ರಾಮತ್ನಾಳ ಮಾತನಾಡಿ, ಉಚಿತ ಕಡ್ಡಾಯ ಶಿಕ್ಷಣ ಸೌಲಭ್ಯಗಳಿದ್ದರೂ ಜಿಲ್ಲೆಯಲ್ಲಿ ಬಾಲಕಾರ್ಮಿಕರು ಮತ್ತು ಬಾಲ್ಯ ವಿವಾಹದಂತಹ ಪ್ರಕರಣಗಳು ಕಂಡು ಬರುತ್ತಿರುವುದು ವಿಷಾದನೀಯ ಸಂಗತಿಯಾಗಿದೆ.

ಬಾಲ ಕಾರ್ಮಿಕರ ನಿರ್ಮೂಲನೆ ಕೇವಲ ಒಂದು ಇಲಾಖೆ ಕೆಲಸ ಮಾಡಿದರೆ ಸಾಲದು, ಇತರೆ ವಿವಿಧ ಇಲಾಖೆಗಳು, ಗ್ರಾಮ ಪಂಚಾಯತಿ ಪಿಡಿಓ ರಿಂದ ಹಿಡಿದು ಆಯಾ ಶಾಲೆಗಳ ಮುಖ್ಯೋಪಾಧ್ಯಾಯರ ಮೇಲೆಯೂ ಜವಾಬ್ದಾರಿ ಇದೆ. ಮಕ್ಕಳು ಒಂದು ವಾರ ಶಾಲೆಗೆ ಬರದಿದ್ದರೆ ಯಾಕೆ ಬರಲಿಲ್ಲ. ಅವ-ರಿಗೆ ಮದುವೆ ಮಾಡಲಾಗಿದೆಯೇ, ಕೆಲಸಕ್ಕೆ ಕಳಿಸಲಾಗಿದೆಯೆ ಅಥವಾ ಅವರ ಆರೋಗ್ಯ ಸರಿಯಾಗಿಲ್ಲವೆ ಎಂಬ ಮಾಹಿತಿಯನ್ನು ಶಿಕ್ಷಕರು ಸಂಗ್ರಹಿಸಬೇಕು. ಈ ಕುರಿತು ಪಾಲಕರಿಗೆ ಒಂದು ನೋಟಿಸ್ ನೀಡುವ ಕೆಲಸವನ್ನು ಶಿಕ್ಷಕರು ಮಾಡಬೇಕು. ಬಾಲಕಾರ್ಮಿಕ ಮಕ್ಕಳನ್ನು ರಕ್ಷಣೆ ಮಾಡಿದಾಗ

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಬೇಕು ಎಷ್ಟು ಮಕ್ಕಳನ್ನು ರಕ್ಷಣೆ ಮಾಡಲಾಗಿದೆ, ಯಾರ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂಬ ಮಾಹಿತಿಯನ್ನು ಜನರಿಗೆ ತಿಳಿಸಬೇಕೆಂದು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ್ ಎಸ್. ದರಗದ ಅವರು ವಿಶ್ವ ಬಾಲಕಾರ್ಮಿಕ ವಿರೋಧಿ ದಿನ- 2025 ರ ಪ್ರಮಾಣ ವಚನ ಬೋಧಿಸಿ ಮಾತನಾಡಿ, ಈ ದಿನಾಚರಣೆ ಉದ್ದೇಶ ಮಕ್ಕಳು ಯಾರೂ ಬಾಲಕಾರ್ಮಿಕರಾಗಿ ಉಳಿಯಬಾರದು ಎಂಬುದಾಗಿದೆ. ಮಕ್ಕಳು ತಮ್ಮ ಬಾಲ್ಯದ ವಯಸ್ಸಿನಲ್ಲಿ ಹೇಗಿರಬೇಕೋ ಹಾಗೆಯೇ ಇರಬೇಕು. ದುಡಿಯುವುದಕ್ಕೆ ಕಳಿಸುವುದ-ರಿಂದ ಅವರ ಬಾಲ್ಯವನ್ನು ಕಸಿದುಕೊಂಡಂತೆ ಆಗುತ್ತದೆ. ಇದು ಯಾಕೆ ಆಗುತ್ತದೆ ಎಂದರೆ ನಮ್ಮಲ್ಲಿ ಇನ್ನೂ ಎಷ್ಟೋ ಕಡೆಗೆ ಜನರಿಗೆ ಸರಿಯಾದ ಸೂರಿಲ್ಲ. ಅವರು ತಮ್ಮ ಹೊಟ್ಟೆ ತುಂಬಿಸಲಾಗದೆ ಅವರ ಮಕ್ಕಳು ದುಡಿಮೆಗೆ ಕೈಜೋಡಿಸುತ್ತಿದ್ದಾರೆ. ಕೆಳವರ್ಗದ ಜನ-ರಿಗೆ ಇನ್ನೂ ಬಹಳಷ್ಟು ಮೂಲಭೂತ ಸೌಲಭ್ಯಗಳನ್ನು ಕೊಡಬೇಕಿದೆ. ಎಷ್ಟೋ ಮಕ್ಕಳಿಗೆ ಇನ್ನೂ ಅವರ ಆಧಾರ್ ಕಾರ್ಡ್‌ಗಳೇ ಇಲ್ಲ ಎಂದು ಹೇಳಿದರು.

ಜಿಲ್ಲಾ ಕಾರ್ಮಿಕ ಅಧಿಕಾರಿ ಸುಧಾ ಗರಗ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಬಾಲಕಾರ್ಮಿಕ ಮಕ್ಕಳಿಗೆ ಬಾಂಡ್‌ಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀಶೈಲ್ ಬಿರಾದಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಪರಶುರಾಮ್ ವೈ. ಶೆಟ್ಟೆಪ್ಪನವರ್, ಮಕ್ಕಳ ರಕ್ಷಣಾ ಯೋಜನೆ- ಯುನಿಸೆಫ್ ಕೊಪ್ಪಳದ ಸಂಯೋಜಕರಾದ ಹರೀಶ್ ಜೋಗಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ, ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸುರೇಶ್ ಜಿ., ಕೊಪ್ಪಳ ವೃತ್ತದ ಕಾರ್ಮಿಕ ನಿರೀಕ್ಷಕರಾದ ಮಂಜುಳಾ, ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕರಾದ ಬಸವರಾಜ ಹಿರೇಗೌಡ್ರ, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಶಾಲಾ ಶಿಕ್ಷಕರು, ಮಕ್ಕಳು ಸೇರಿದಂತೆ ಇತರೆ ಹಲವಾರು ಜನರು ಉಪಸ್ಥಿತರಿದ್ದರು.

# ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಡಿ ಅರ್ಜಿ ಆಹ್ವಾನ

**ಕೊಪ್ಪಳ:** ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮದಿಂದ 2025-26ನೇ ಸಾಲಿನ ವಿವಿಧ ಯೋಜನೆಗಳಡಿ ಉಪ್ಪಾರ ಹಾಗೂ ಅದರ ಉಪಜಾತಿಗಳಿಗೆ ಸೇರಿದ ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ನಿಗಮದ ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಸ್ವಯಂ ಉದ್ಯೋಗ ನೇರಸಾಲ ಯೋಜನೆ(ವಾಣಿಜ್ಯ ಬ್ಯಾಂಕುಗಳ ಸಹಯೋಗದೊಂದಿಗೆ), ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ(ಹೊಸವಿದ್ಯಾರ್ಥಿಗಳುಮತ್ತುನವೀಕರಣ), ವಿದೇಶಿ ವ್ಯಾಸಂಗ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ ಹಾಗೂ ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ(https://www.kaushalkar.com/) ಅಡಿ ಸೌಲಭ್ಯ ಪಡೆಯಲು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಒಂದು ಬಾರಿ ನಿಗಮಗದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹ-ರಿರುವುದಿಲ್ಲ. ಕುಟುಂಬದ ಒಬ್ಬರಿಗೆ ಮಾತ್ರ ಸೌಲಭ್ಯ ಪಡೆಯಲು ಅವಕಾಶವಿದೆ. 2023-24ಮತ್ತು 2024-25ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿ ಸೌಲಭ್ಯ ಪಡೆಯದೇ ಇರುವ ಫಲಾಪೇಕ್ಷಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. 2023-24 ಮತ್ತು 2024-25 ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿರುವ ಯೋಜನೆಯನ್ನು ಹೊರತುಪಡಿಸಿ ಉಳಿದ ಯೋಜನೆಗಳಿಗೆ ಪ್ರಸ್ತುತ ಅರ್ಜಿ ಸಲ್ಲಿಸಬಹುದು.

ಅರ್ಜಿದಾರರು ಆಧಾರ್ ಹಾಗೂ ಮೊಬೈಲ್ ಸಂಖ್ಯೆ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡಿನಲ್ಲಿರುವಂತೆ ಹೆಸರು(ಶ್ರೀ/ಶ್ರೀಮತಿ/ಕುಮಾರಿ ಮುಂತಾದ ಮಾಹಿತಿಯನ್ನು ಒಳಗೊಂಡಂತೆ) ಇತರೆ ದಾಖಲಾತಿಗಳಾದ ಜಾತಿ ಮತ್ತು ಆದ-ಾಯ ಪ್ರಮಾಣ ಪತ್ರ, ಬ್ಯಾಂಕ್ ಪಾಸ್‌ಪುಸ್ತಕದಲ್ಲಿ ಹೊಂದಾಣಿಕೆಯಾಗಬೇಕು. ಗ್ರಾಮಒನ್, ಬೆಂಗಳೂರು ಒನ್, ಕರ್ನಾಟಕ ಒನ್, ನಾಗರಿಕ ಸೇವಾ ಕೇಂದ್ರಗಳ ಮೂಲಕ ಸೇವಾಸಿಂಧು ಪೋರ್ಟಲ್ www.sevasindhu.karnataka.gov.in ನಲ್ಲಿ ಆನ್‌ಲೈನ್‌ನಲ್ಲಿ ಜುಲೈ 03 ರೊಳಗೆ ಅರ್ಜಿ ಸಲ್ಲಿಸಬೇಕು.

ಸೌಲಭ್ಯಗಳ ವಿವರ, ಅರ್ಹತೆ, ಮಾನದಂಡ ಮತ್ತು ದಾಖಲಾತಿಗಳ ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್ www.upparadevelopment.karnataka.gov.in ಗೆ ಭೇಟಿ ನೀಡಬಹುದು ಅಥವಾ ನಿಗಮದ ದೂರವಾಣಿ ಸಂಖ್ಯೆ 080-22252555 ಅಥವಾ ಕೊಪ್ಪಳ ಕಚೇರಿ ದೂ.ಸಂ: 08539-221847 ಗೆ ಸಂಪರ್ಕಿಸಬಹುದು ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಘಟನಾ ಮಂತ್ರಿಯಾಗಿ ದಂಡಣ್ಣವರ, ಮಹಿಳಾ ಜಾಗರಣ ಪ್ರಮುಖರಾಗಿ ಡಾ. ಚಂದ್ರಿಕಾ ನೇಮಕ





**ಬಾಗಲಕೋಟ :** ಅಖಿಲ ಭಾರತೀಯ ಗ್ರಾಹಕ ಪಂಚಾಯತ್ (ಎಬಿಜಿಪಿ) ಕರ್ನಾಟಕ ಪ್ರಾಂತದ ಸಂಘಟನಾ ಮಂತ್ರಿಯಾಗಿ ಬಾಗಲಕೋಟೆಯ ರಂಗನಗೌಡ ದಂಡಣ್ಣವರ ನೇಮಕಗೊಂಡಿದ್ದಾರೆ. ಅವರು ಕಳೆದ ಮೂರು ವರ್ಷಗಳಿಂದ ಸಹ ಸಂಘಟನಾ ಮಂತ್ರಿಯಾಗಿ ಸೇವೆ ಸಲ್ಲಿಸುತ್ತಿದ್ದರು.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಎಬಿಜಿಪಿ ಕರ್ನಾಟಕ ಪ್ರಾಂತ ಸಭೆಯಲ್ಲಿ ಈ ಘೋಷಣೆಯನ್ನು ಕೇಂದ್ರದ ಮಹಿಳಾ ಅಧಿಕಾರಿ ಡಾ. ವೀಣಾ ದೀಕ್ಷಿತ್ ವೀಕ್ಷಕರಾಗಿ ಆಗಮಿಸಿ ಅಧಿಕೃತವಾಗಿ ಪ್ರಕಟಿಸಿದರು.

ಈ ವೇಳೆ ಎಬಿಜಿಪಿ ಕರ್ನಾಟಕ ಪ್ರಾಂತದ ಅಧ್ಯಕ್ಷರಾದ ನರಸಿಂಹ ನಕ್ಷತ್ರಿ ಹಾಗೂ ಕಾರ್ಯದರ್ಶಿ ಶ್ರೀಮತಿ ಗಾಯತ್ರಿ ನಾಡಿಗ್ ಅವರೇ ಮುಂದುವರೆದಿದ್ದು, ಬಿ.ವ್ಹಿ.ವ್ಹಿ. ಸಂಘದ ಎಸ್. ಸಿ. ನಂದಿಮಠ ಕಾನೂನು ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ಶ್ರೀಮತಿ ಚಂದ್ರಿಕಾ ಕುರಂದವಾಡ ಅವರಿಗೆ ಪ್ರಾಂತ ಮಹಿಳಾ ಜಾಗರಣ ಪ್ರಮುಖ ಜವಾಬ್ದಾರಿ ನೀಡಲಾಗಿದೆ.

ಪ್ರಾಂತ ಮಟ್ಟದಲ್ಲಿ ಜಿಲ್ಲೆಯಿಂದ ಇಬ್ಬರ ನೇಮಕಾತಿಯು ಬಾಗಲಕೋಟೆ ಜಿಲ್ಲೆಯ ಗ್ರಾಹಕ ಚಳುವಳಿ ಮತ್ತು ಎಬಿಜಿಪಿಯ ಬೆಳವಣಿಗೆಗೆ ಹೊಸಬಲ ನೀಡಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

# ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆ ಆಕಾಂಕ್ಷಿಗಳಿಗೆ ಎಚ್ಚರಿಕೆ

**ಕೊಪ್ಪಳ:** ಕೊಪ್ಪಳ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಬರುವ 09 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 88 ಅಂಗನವಾಡಿ ಸಹಾಯಕಿಂ-ುರ ಗೌರವ ಸೇವೆ ಹುದ್ದೆಗಳ ಭರ್ತಿಗಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಮಧ್ಯವರ್ತಿಗಳ ಮೋಸಕ್ಕೆ ಬಲಿಯಾಗದಂತೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

09 ಅಂಗನವಾಡಿ ಕಾರ್ಯಕರ್ತೆ ಹಾಗೂ 88 ಅಂಗನವಾಡಿ ಸಹಾಯಕಿಯರ ಗೌರವ ಸೇವೆ ಹುದ್ದೆಗಳ ಭರ್ತಿಗಾಗಿ ದಿನಾಂಕ: 23-09-2024 ರಿಂದ 23-10-2024 ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿ-ತ್ತು. ಅದರಂತೆ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಲು ಕ್ರಮ ವಹಿಸಲಾಗುತ್ತಿದ್ದು, ಶೀಘ್ರದಲ್ಲಿಯೇ ತಾತ್ಕಾಲಿಕ ಆ ಂ ು ್ಕ ಪ ್ ಟ್ಟಿ ಂ ು ು ನ ್ನ ಪ್ರಕಟಿಸಲಾಗುವುದು.

ಅಂತಿಮ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದ-ೇಶವನ್ನು ಜಿಲ್ಲಾ ಉಪನಿರ್ದೇಶಕರ ಕಚೇರಿಯಿಂದ ಅಭ್ಯರ್ಥಿಗಳ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಕಳುಹಿಸಲಾಗುವುದು. ಆದ್ದರಿಂದ ಅಭ್ಯರ್ಥಿಗಳು ಯಾವುದೇ ಮಧ್ಯವರ್ತಿಗಳು ಅಥವಾ ಇದಕ್ಕೆ ಸಂಬಂಧಿಸಿದಂತೆ ಯಾರೊಂದಿಗೂ ಹಣಕಾಸಿನ ವ್ಯವಹಾರ ಮಾಡಬಾರದು ಎಂದು ಕೊಪ್ಪಳ ಯೋಜನೆಯ ಶಿಶು ಅಭಿವೃದ್ಧಿ ಯೋಜನಾಧಿಕಾ-ರಿಗಳು ಪ್ರಕಟಣೆ ಮೂಲಕ ಎಚ್ಚರಿಕೆ ನೀಡಿದ್ದಾರೆ.

# ಹೊಸುರ ಕ್ಷೇತ್ರದ ಉಪ ಚುನಾವಣೆ: ಪರಶುರಾಮ ಕುಷ್ಟಗಿ ಆಯ್ಕೆ



**ಇಳಕಲ್ :** ತಾಲೂಕಿನ ಬಲಕುಂದಿ ಗ್ರಾಮ ಪಂಚಾಯತಿಯ ವಡ್ಡರಹೊಸುರ ಕ್ಷೇತ್ರದ ಉಪ ಚುನಾವಣೆಯಲ್ಲಿ ಪರಶುರಾಮ ಕುಷ್ಟಗಿ ಅವಿರೋಧವಾಗಿ ಆಯ್ಕೆಯಾದರು ಎಂದು ಬಲಕುಂದಿ ಪಿಡಿಓ ಎ ಎಚ್ ಆವಿನ ತಿಳಿಸಿದ್ದಾರೆ.

ಈ ಕ್ಷೇತ್ರದ ಸದಸ್ಯ ಮಹಾಂತೇಶ ಕುಷ್ಟಗಿ ನಿಧನದಿಂದಾಗಿ ತೆರವುಗೊಂಡಿದ್ದ ಸ್ಥಾನಕ್ಕೆ ನಡೆದ ಉಪಚುನಾವಣೆಯಲ್ಲಿ ಅವರ ಸಹೋದರ ಪರಶುರಾಮ ಕುಷ್ಟಗಿ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆ ನಡೆಯಿತು ಎಂದು ಅವರು ವಿವರಿಸಿದರು.

**ವರದಿ ನಬಿ ಹುಣಚಗಿ**

# ವಿಶ್ವನಾಥ ವಿ. ಮುಗತಿ ನಿಧನ



ಬನಹಟ್ಟಿ: ಇಲ್ಲಿಯ ಹಳೆಯ ನೀರಿನ ಟ್ಯಾಂಕ್ ಹತ್ತಿರದ ನಿವಾಸಿ, ಕುರುಹಿನಶೆಟ್ಟಿ ಸಮಾಜದ ಯುವಕ, ಕಲಬುರಗಿಯ ಮೂರನೇಯ ಹೆಚ್ಚುವರಿ ಹಿರಿಯ ಶ್ರೇಣಿಯ ನ್ಯಾಯಾಧೀಶರಾಗಿದ್ದ ವಿಶ್ವನಾಥ ವೀರಸಂಗಪ್ಪ ಮುಗತಿ ತಮ್ಮ 44 ನೆಯ ವಯಸ್ಸಿನಲ್ಲಿ ತೀವ್ರ ಹೃದಯಾಘಾತದಿಂದ ಜೂನ್ 16 ರಂದು ಮುಂಜಾನೆ 10-30 ಕ್ಕೆ ನ್ಯಾಯಾಲಯದ ಚೇಂಬರಿನಲ್ಲಿ ನಿಧನರಾದರು.

ಅವರು ತಮ್ಮ ಹಿಂದೆ ವೃದ್ಧ ತಂದೆ, ಪತ್ನಿ ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

ಬನಹಟ್ಟಿಯ ನ್ಯಾಯಾಲಯದಲ್ಲಿ ವಕೀಲರಾಗಿ ಸೇವೆ ಸಲ್ಲಿಸಿದ ನಂತರ, ನ್ಯಾಯಾಂಗ ಇಲಾಖೆಯ ಸೇವೆಗೆ ಆಯ್ಕೆಯಾಗಿದ್ದರು.

ಶಿವಮೊಗ್ಗ, ಹುಬ್ಬಳ್ಳಿ, ಗಂಗಾವತಿ, ಚನ್ನಗಿರಿಯಲ್ಲಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದ ಮುಗತಿಯವರು ಕಳೆದ ಹದಿನೈದು ದಿನಗಳ ಹಿಂದೆಯಷ್ಟೇ ಕಲಬುರಗಿ ನಗರಕ್ಕೆ
ವರ್ಗಾವಣೆಯಾಗಿದ್ದರು.

ತಾವು ನ್ಯಾಯಾಲಯದಲ್ಲಿ ನೀಡುತ್ತಿದ್ದ ಆದೇಶಗಳನ್ನು ಅವರು ಕನ್ನಡದಲ್ಲಿ ನೀಡುತ್ತಿದ್ದು, ಅದಕ್ಕಾಗಿ ರಾಜ್ಯ ಸರ್ಕಾರದಿಂದ ಪ್ರಶಸ್ತಿಯನ್ನು ಕೂಡಾ ಪಡೆದುಕೊಂಡಿದ್ದರು.

ಮೃತರ ಅಂತ್ಯಕ್ರಿಯೆ ಬನಹಟ್ಟಿಯ ಹಿಂದೂ ರುದ್ರ ಭೂಮಿಯಲ್ಲಿ ಸೋಮವಾರ ರಾತ್ರಿ ನಡೆಯಿತು.

ದೇವರು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಕನ್ನಡ ದಿನಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇನೆ.

# ಪಲ್ಲವಿ ಲಕ್ಷ್ಮಣ ಕಾಖಂಡಕಿ ನಿಧನ



**ರಬಕವಿ-ಬನಹಟ್ಟಿ :** ತಾಲೂಕಿನ ಸಸಾಲಟ್ಟಿ ಗ್ರಾಮದ ನಿವಾಸಿ ಹಾಗೂ ಬಬಲೇಶ್ವರ ತಾಲೂಕಿನ ಶಿರಬೂರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಪಲ್ಲವಿ ಲಕ್ಷ್ಮಣ ಕಾಖಂಡಕಿ ತಮ್ಮ 33 ನೆಯ ವಯಸ್ಸಿನಲ್ಲಿ ಕಳೆದ ಜೂನ್ 6 ರಂದು ನಿಧನರಾದರು.

ಮೃತರು ತಮ್ಮ ಹಿಂದೆ ಪತಿ, ಓರ್ವ ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಬಾಳಪ್ಪ ಹಳ್ಯಾಳ ನಿಧನ



ಬನಹಟ್ಟಿ: ಇಲ್ಲಿಯ ದೇವರದಾಸಿಮಯ್ಯ ಕಾಲನಿಯ ಕೆಎಚ್ಡಿಸಿ ನಿವಾಸಿ, ನಿವೃತ್ತ ಶಿಕ್ಷಕ ಬಾಳಪ್ಪ ಹಳ್ಯಾಳ ತಮ್ಮ 89 ನೆಯ ವಯಸ್ಸಿನಲ್ಲಿ ಜೂನ್ 15 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ.

# ಕುವೆಂಪು ಮತ್ತು ವೈಚಾರಿಕತೆ ಕುರಿತು ಉಪನ್ಯಾಸ ಕಾರ್ಯಕ್ರಮ ಸಮಸಮಾಜ ಸಾಹಿತ್ಯದ ಹರಿಕಾರ ಕುವೆಂಪು; ಪ್ರಶಾಂತ ನಾಯಕ



**ಬಾದಾಮಿ :** ಕುವೆಂಪು ಅವರ ಆರಂಭಿಕ ಕಾವ್ಯದಿಂದ ವಿಶ್ವಮಾನವನ ಸಂದೇಶದವರೆಗೆ ಅಧ್ಯಯನ ಅಲ್ಲಿ ಮಾಡಿದಾಗ 12ನೇ ಶತಮಾನದ ಸ್ತು ಶರಣರು ಬರೆದ ಸಮಸಮಾಜದ ಸಾಹಿತ್ಯದಂತೆ ರಾಷ್ಟ್ರಕವಿ ನ ಕುವೆಂಪು ಸಾಹಿತ್ಯ ಕೃತಿಗಳಲ್ಲಿ ಕಾಣಬಹುದು' ಎಂದು ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರಶಾಂತ ನಾಯಕ ಹೇಳಿದರು.

ಅವರು ಪಟ್ಟಣದ ಶ್ರೀ ಮದ್ವೀರಶೈವಶಿವಯೋಗಮಂದಿರ ಸಂಸ್ಥೆಯ ಶಿವಯೋಗಮಂದಿರ ಸೇವಾ ಬಳಗದಿಂದ ಶಿವಯೋಗಮಂದಿರ ಶಾಖಾಮಠದ ಆವರಣದಲ್ಲಿ ದಲ್ಲಿ 'ಕುವೆಂಪು ಮತ್ತು ವೈಚಾರಿಕತೆ' ಬಗ್ಗೆ ಉಪನ್ಯಾಸ ನೀಡಿ, ಮಾತನಾಡಿದರು.

'ರಾಮಾಯಣ ವಾಲ್ಮೀಕಿ ಸೇರಿದಂತೆ ಅನೇಕ ಕವಿಗಳು, ಋಷಿಗಳು ಬರೆದಿದ್ದಾರೆ. ಆದರೆ ರಾಮಾಯಣ ದರ್ಶನದಲ್ಲಿ ಕುವೆಂಪು ಅವರು ಬರೆದಿರುವುದು ಬೇರೆಯಾಗಿದೆ. ಇಲ್ಲಿ ಬರುವ ರಾವಣ ಮತ್ತು ಮಂಥ-'ರೆ ವ್ಯಕ್ತಿಗಳಲ್ಲಿ ಶ್ರೇಷ್ಠ ಗುಣ ಬಣ್ಣಿಸಿದ್ದಾರೆ' ಎಂದರು.

'ಹಿಂದಿನ ಕೃತಿಕಾರರು ರಾವಣ ಮತ್ತು ಮಂಥರೆ ಕೆಟ್ಟ ಗುಣಗಳನ್ನು ಬರೆದಿದ್ದಾರೆ. ಅದು ಆ ಕಾಲದ ಕವಿಗಳು ಭಾವಿಸಿದ್ದಿರಬಹುದು. ಈಗ ಏಕೆ ಬದಲಾಗಬಾರದು ಎಂದು ಕುವೆಂಪು ಈ ಪಾತ್ರಗಳ ಗುಣಗಳನ್ನು ಬಣ್ಣಿಸಿದ್ದಾರೆ' ಎಂದು ತಿಳಿಸಿದರು.

'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಕಥೆ, ಕಾವ್ಯ, ನಾಟಕ, ಕಾದಂಬರಿ, ಮಹಾಕಾವ್ಯ ಮತ್ತು ಖಂಡಕಾವ್ಯಗಳನ್ನು ಬರೆದು ಕನ್ನಡದ ಹೆಮ್ಮೆಯ ಸಾಂಸ್ಕೃತಿಕ ಮತ್ತು ದಾರ್ಶನಿಕ ಕವಿಯಾಗಿದ್ದರು' ಎಂದು ಹೇಳಿದರು. ನಮ್ಮೊಳಗಿರುವ ಸತ್ಯಗಳಿಗೆ ಮುಖಾಮುಖಿಯಾಗಿದರೆ ಉತ್ತಮ ಬದುಕು ಕಟ್ಟಿಕೊಳ್ಳಬಹುದು. ಈ ನೆಲದಲ್ಲಿ ಜನಿಸಿದ ಕುಂವೆಂಪು ಅವರು ಮಾನವ ವಿಶ್ವಮಾನವನಾಗಬೇಕೆಂಬ ಸಂದೇಶವು ವಿಶ್ವದ ಮನುಕುಲಕ್ಕೆ ಸಂದೇಶವಾಗಿದೆ ಎಂದು ಸಾನ್ನಿಧ್ಯ ವಹಿಸಿದ್ದ ಶರಣಬಸವ ಸ್ವಾಮೀಜಿ ತಿಳಿಸಿದರು. ಸಾಹಿತ್ಯ ಆಸಕ್ತರು, ಶಿವಯೋಗಮಂದಿರ ಸೇವಾ ಬಳಗದ ಸದಸ್ಯರು ಪಾಲ್ಗೊಂಡಿದ್ದರು.



ನವನಗರದ ಸೆಕ್ಟರ್ ನಂ.45ರಲ್ಲಿ ಇರುವ ಹಿರಿಯಕ್ಕ ಸಮುದಾಯ ಭವನದ ಹತ್ತಿರದಲ್ಲಿಂದು ಜಿಲ್ಲಾ ಛಲವಾದಿ ಮಹಾಸಭಾ(ಕೆ.ಶಿವರಾಮ)ಬಣದಿಂದ ಪರಿಸರ ದಿನಾಚರಣೆಯ ಅಂಗವಾಗಿ ವಿವಿಧ ಜಾತಿಯ ಗಿಡಗಳ ಸಸಿಗಳನ್ನು ನೆಡುವುದರ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು;
ಈ ಸಂದರ್ಭದಲ್ಲಿ ಜಿಲ್ಲಾ ಛಲವಾದಿ ಮಹಾಸಭಾ ಅಧ್ಯಕ್ಷರಾದ ವಿವೇಕಾನಂದ ಗರಸಂಗಿ, ಅಂಬರೀಷ ಹಿರೇಮನಿ, ಜೈಶಂಕರ ಕಾಂಬಳೆ, ಶ್ರೀಧರ ಚಿಕ್ಕಲಕಿ, ಸುಭಾಷ್ಚಂದ್ರ ಬದಾಮಿ, ಶನಶಪ್ಪ ಬಂಡಿ, ಗುರುಲಿಂಗ ಛಲವಾದಿ, ಪ್ರಕಾಶ ಚಲವಾದಿ, ಯಮನೂರಿ ಹಿರೇಮನಿ, ಉಮಾಪತಿ ನೀಲನಾಯಕ, ಸಿದ್ದರಾಜ ಸೊನ್ನದ ಸೇರಿದಂತೆ ಸಮಾಜದ ಹಿರಿಯರು ಹಾಗೂ ಮುಖಂಡರು ಭಾಗವಹಿಸಿದ್ದರು.

# ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದಿಂದ ಮೋದಿ 11 ವಿಶೇಷ ಕಾರ್ಯಾಗಾರ ಕಾರ್ಯಕರ್ತರಿಂದ ವಿಕಸಿತ ಭಾರತ 2047 ಪ್ರತಿಜ್ಞೆ: ವಿಮಾನ ದುರಂತದಲ್ಲಿ ಸಾವನ್ನಪ್ಪಿದ ಜನರಿಗೆ ಸಂತಾಪ



**ಬಾಗಲಕೋಟೆ :** ಮುಂಬರುವ ಚುನಾವಣೆಯಲ್ಲಿ ಬಾಗಲಕೋಟೆ ಜಿಲ್ಲೆ ಸೇರಿದಂತೆ ರಾಜ್ಯದಲ್ಲಿ ಬಿಜೆಪಿ ಗೆಲ್ಲಲಿದ್ದು ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದೆ ಬರುವ ವಿಶ್ವಾಸವಿದೆ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ನಗರದ ಬಿ.ವಿ.ವಿ.ಸಂಘದ ಮಿನಿ ಸಭಾಂಗಣದಲ್ಲಿ ಶನಿವಾರ ವಿಕಸಿತ ಭಾರತ ಮೋದಿ ಸರಕಾರ 11 ವರ್ಷದ ಸಾಧನಾ ಅಭಿಯಾನದ ಕುರಿತು ನಡೆದ ಕಾರ್ಯಾಗಾರವನ್ನು ಭಾರತಮಾತೆಗೆ ಪುಷ್ಪಾಂಜಲಿ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಪ್ರಧಾನಿ ಮೋದಿಯವರಿಂದಾಗಿ ಇಂದು ಇಡಿ ಜಗತ್ತೆ ಭಾರತದತ್ತ ತಿರುಗಿ ನೋಡುತ್ತಿದೆ, ಜಾಗತಿಕವಾಗಿ ಭಾರತ ಪ್ರಭಲವಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಾಗಲಕೋಟೆ ಜಿಲ್ಲೆ ಸೇರಿದಂತೆ ರಾಜ್ಯದ ಎಲ್ಲ ಮತಕ್ಷೇತ್ರಗಳಲ್ಲಿಯೂ ಭಾರತೀಯ ಜನತಾ ಪಾರ್ಟಿ ಗೆದ್ದು ಅಧಿಕಾರದ ಗದ್ದುಗೆ ಹಿಡಿಯಲಿದೆ ಎಂಬ ವಿಶ್ವಾಸವಿದೆ, ಆ ನಿಟ್ಟಿನಲ್ಲಿ ಎಲ್ಲರೂ ಕಾರ್ಯೋನ್ಮುಖರಾಗೋಣ ಎಂದರು.

ಕಾರ್ಯಾಗಾರದ ಅಧ್ಯಕ್ಷತೆಯನ್ನು ವಹಿಸಿದ ಹಿಂದಿನ ಶಾಸಕರಾದ ಡಾ.ವೀರಣ್ಣ ಚರಂತಿಮಠ ಅವರು ಮಾತನಾಡಿ ಸದೃಡ ಹಾಗೂ ಸಮೃದ್ಧ ಭಾರತ ಕಟ್ಟುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ 11 ವರ್ಷಗಳ ಆಡಳಿತ ಭಾರತದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವ ಮೈಲಿಗಲ್ಲಾಗಿದೆ, ವಿಕಸಿತ ಭಾರತಕ್ಕೆ ಭದ್ರ ಬುನಾದಿ ಹಾಕುವ ನಿಟ್ಟಿನಲ್ಲಿ ಉದ್ಯೋಗಾವಕಾಶ ಸೃಷ್ಟಿಸಿ, ಹಲವು ಯೋಜನೆಗಳ ಮೂಲಕ ಎಲ್ಲರ ಜತೆ ಎಲ್ಲರ ವಿಕಾಸದ ಸಂಕಲ್ಪಿತ ಗುರಿ ಸಾಧಿಸಿರುವ ಹೆಮ್ಮೆಯ ಪ್ರಧಾನ ಮಂತ್ರಿಯವರ ಕೇಂದ್ರದ ಯೋಜನೆಗಳು ಶತಮಾನದ ಶಾಶ್ವತ ಹೆಜ್ಜೆ ಗುರುತುಗಳಾಗಿವೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ವಿಕಸಿತ ಭಾರತ ಮೋದಿ ಸರಕಾರ 11ವರ್ಷದ ಸಾಧನಾ ಅಭಿಯಾನದ ಜಿಲ್ಲಾ ಸಹ ಸಂಚಾಲಕ ನಂದು ಗಾಯಕವಾಡ ದೇಶದಲ್ಲಿ ಅಟಲ್ ಬಿಹಾರಿ ವಾಜಪಾಯಿ ಅವರಿಂದ ಈಗಿನ ಪ್ರಧಾನಿ ನರೇಂದ್ರ ಮೋದಿಯವರ ಆಡಳಿತದಲ್ಲಿ ದೇಶ ಕಂಡ ಪ್ರಗತಿಯನ್ನು ವಿವರಿಸಿದ ಅವರು, ನಗರ ಮತ್ತು ಗ್ರಾಮೀಣ ಭಾಗದಲ್ಲಿ ಮೋದಿಯವ-ರಿಂದಾದ ದೇಶದ ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿವಿಧ ಕೇಂದ್ರದ ಯೋಜನಗೆಳನ್ನು ಜನಸಾಮಾನ್ಯರಿಗೆ ಮುಟ್ಟಿಸುವ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿ ಕಾರ್ಯರೂಪಕ್ಕೆ ತಂದಿರುವ ಶ್ರೇಯಸ್ಸು ನಮ್ಮ ಪ್ರಧಾನ ಮಂತ್ರಿಗಳವರದ್ದಾಗಿದೆ ಎಂದರು. ಕಾರ್ಯಾಗಾರದ ವೇದಿಕೆ ಮೇಲೆ ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೊಣ್ಣೂರ, ನಗರಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ, ವಿಕಸಿತ ಭಾರತ ಮೋದಿ ಸರಕಾರ 11ವರ್ಷದ ಸಾಧನಾ ಅಭಿಯಾನದ ಜಿಲ್ಲಾ ಸಹ ಸಂಚಾಲಕ ಬಸವರಾಜ ಅವರಾದಿ, ನಗರಸಭೆ ಅಧ್ಯಕ್ಷೆ ಸವಿತಾ ಲಂಕೆನ್ನವರ, ಮುಖಂಡರಾದ ಡಾ. ಎಂ.ಎಸ್.ದಡ್ಡೆನ್ನವರ, ಗುಂಡುರಾವ ಶಿಂಧೆ, ಬಸವರಾಜ ಯಂಕಂಚಿ, ಲಕ್ಷ್ಮೀ ನಾರಾಯಣ ಕಾಸಟ್, ಮುತ್ತಣ್ಣ ಬೆಣ್ಣೂರ ಸೇರಿದಂತೆ ನಗರಸಭೆ ಸದಸ್ಯರುಗಳು, ಪಕ್ಷದ ಮುಖಂಡರು, ನಗರ ಹಾಗೂ ಗ್ರಾಮೀಣ ಮಂಡಲಗಳ ಪದಾಧಿಕಾ-ರಿಗಳು, ಜಿಲ್ಲಾ ಸಂಚಾಲಕರು, ವಿವಿಧ ಮೋರ್ಚಾ ಪದಾಧಿಕಾರಿಗಳು ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ವಿಕಸಿತ ಭಾರತ ಮೋದಿ ಸರಕಾರ 11ವರ್ಷದ ಸಾಧನಾ ಅಭಿಯಾನದ ನಗರ ಮಂಡಲದ ಸಂಚಾಲಕರನ್ನಾಗಿ ಚಂದ್ರಕಾಂತ ಪತ್ತಾರ, ಕಾಂತು ಖಾತೆದಾರ, ಸಿದ್ದೇಶ್ವರ ಜಿರಗಿ, ಗ್ರಾಮೀಣ ಂಡಲ ಸಂಚಾಲಕರಾಗಿ ಕಲ್ಲಪ್ಪ ಭಗವತಿ, ಮುತ್ತು ಸೀಮಿಕೇರಿ, ಬಸವರಾಜ ಪಾಟೀಲ ಅವರನ್ನು ನೇಮಿಸಿಲಾಯಿತು, ನಂತರ ವಿಕಸಿತ ಭಾರತ 2047 ಕನಸನ್ನು ನನಸಾಗಿಸಲು ಪ್ರತಿಜ್ಞೆ ಮಾಡಲಾಯಿತು.

ಸಂತಾಪ ಸೂಚನೆ: ಗುಜರಾತಿನ ಅಹಮದಾಬಾದ್‌ನಲ್ಲಿ ನಡೆದ ವಿಮಾನ ದುರಂತದಲ್ಲಿ ಸಾವನ್ನಪ್ಪಿದ ಅಮಾಯಕ ಜನರಿಗೆ ಮೌನಾಚರಣೆ ಮೂಲಕ ಸಂತಾಪ ಸೂಚಿಸಿಲಾಯಿತು.

ಉಮೇಶ ಹಂಚಿನಾಳ ನಿರೂಪಿಸಿದರು, ಮಲ್ಲೇಶ ವಿಜಾಪುರ ಸ್ವಾಗತಿಸಿದರು, ಕಲ್ಲಪ್ಪ ಭಗವತಿ ಪ್ರತಿಜ್ಞಾವಿಧಿ ಭೋದಿಸಿದರು, ಮುತ್ತು ಸಿಮಿಕೇರಿ ವಂದಿಸಿದರು.

# ಶಿಥಿಲಗೊಂಡ ಕಂದಾಯ ಇಲಾಖೆಯ ಕಟ್ಟಡ: ತೆರವುಗೊಳಿಸಲು ಸಾರ್ವಜನಿಕರ ಒತ್ತಾಯ

**ಬನಹಟ್ಟಿ :** ನಗರದ ಹೃದಯ ಭಾಗದಲ್ಲಿರುವ ಕಂದಾಯ ಇಲಾಖೆಯ ಪಾಳು ಬಿದ್ದ ಕಟ್ಟಡದ ಅವಶೇಷಗಳನ್ನು ಕೂಡಲೇ ತೆರವು ಗೊಳಿಸಬೇಕೆಂದು ಹಲವು ವರ್ಷಗಳಿಂದ ಬೇಡಿಕೆಯಿದ್ದರೂ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದಿಂದ ಅದು ಹಾಗೆಯೇ ಉಳಿದಿದ್ದು, ಕೂಡಲೇ ತೆರವುಗೊಳಿಸುವಂತೆ ನಾಗರಿಕರು ಒತ್ತಾಯಿಸಿದ್ದಾರೆ.



ಈಗಾಗಲೇ ಗ್ರಂಥಾಲಯವು ಇಲ್ಲಿ ತನ್ನ ಕಾರ್ಯ ನಿರ್ವಹಿಸುತ್ತಿತ್ತು. ನಂತರದ ದಿನಗಳಲ್ಲಿ ಈ ಕಟ್ಟಡ ತೀವ್ರ ಶಿಥಿಲಾವಸ್ಥೆಗೊಂಡ ನಂತರ ಜನ ವಸತಿಗೆ ಇದು ಯೋಗ್ಯವಲ್ಲವೆಂದು ಸುಮಾರು ಹದಿನೈದು ವರ್ಷಗಳಿಂದ ಈ ಕಟ್ಟಡ ಖಾಲಿಯಿದ್ದು ಒಂದು ನಮೂನಿ ಭೂತ್ ಬಂಗ್ಲಾದಂತಾಗಿದೆ. ಹಿಂದಿನ ಹದಿನೈದು ವರ್ಷಗಳಿಂದ ಈ ಕಟ್ಟಡ ತೆರವುಗೊಳಿಸದೆ ಅಧಿಕಾರಿಗಳು ತೀವ್ರ ನಿರ್ಲಕ್ಷ್ಯ ವಹಿಸಿದ್ದಾರೆ. ಇದರಿಂದ ಸಾರ್ವಜನಿಕರ ಕೆಂಗಣ್ಣಿಗೆ ಇಲಾಖೆ ಗುರಿಯಾಗಿದೆ.

ಮಳೆಗಾಲ ಆರಂಭವಾದರೆ ಸಾಕು. ಕಟ್ಟಡದ ಇನ್ನಷ್ಟು ಶಿಥಿಲಗೊಂಡ ಕಟ್ಟಡ ಮತ್ತಷ್ಟು ಬಿರುಕು ಬಿಡಲು ಕಾರಣವಾಗಿದೆ.

ಪ್ರಸಕ್ತ ವರ್ಷವಂತೂ ಈಗಾಗಲೇ ಮಳೆಗಾಲ ಪ್ರಾರಂಭವಾಗಿದ್ದು, ಮೇಲ್ಛಾವಣಿ ಸಂಪೂರ್ಣ ಕುಸಿದಿದ್ದು, ಶಿಥಿಲವಾಗಿರುವ ಕಟ್ಟಡದ ಗೋಡೆಗಳು ಕುಸಿದು ಬಿದ್ದು ಪ್ರಾಣ ಹಾನಿಯಾಗುವ ಮೊದಲೇ ಕಟ್ಟಡ ತೆರವುಗೊಳಿಸಿ, ಮುಂದೆ ಆಗುವ ಅನಾಹುತ ತಪ್ಪಿಸಬೇಕು. ಈ ಬಗ್ಗೆ ಕಂದಾಯ ಇಲಾಖೆ ಅಧಿಕಾರಿಗಳು ಗಮನ ಹರಿಸಬೇಕೆಂದರು.

**ಗಲೀಜು:** ಪಟ್ಟಣದ ಮಧ್ಯ ಭಾಗದ ವರ್ತುಲದಲ್ಲಿಯೇ ಈ ಪಾಳುಬಿದ್ದ ಕಟ್ಟಡವಿದೆ. ಆಗಾಗ ಇಲ್ಲಿ ಹಾವುಗಳ ದರ್ಶನವೂ ಆಗುತ್ತದೆ. ದಿನಂಪ್ರತಿ ನೂರಾರು ಜನ ಇದೇ ಕಟ್ಟಡದ ಕಟ್ಟೆಯ ಮೇಲೆಯೇ ಕುಳಿತುಕೊಳ್ಳುವ ರೂಢಿ. ನಿರಂತರ ಜನನಿಬಿಡ ಪ್ರದೇಶವಾಗಿರುವ ಇಲ್ಲಿ ಆಕಸ್ಮಿಕವಾಗಿ ಶಿಥಿಲಗೊಂಡ ಕಟ್ಟಡ ಬಿದ್ದರೆ, ಅಪಾಯವಾಗುವ ಸಂಭವ ಜಾಸ್ತಿ. ತಕ್ಷಣವೇ ಕಟ್ಟಡ ತೆರವು ಗೊಳಿಸಬೇಕೆಂದು ಬನಹಟ್ಟಿಯ ಜನತೆ ಒತ್ತಾಯಿಸಿದ್ದಾರೆ.

**'ನಗರಸಭೆ ಯೋಜನೆಯಡಿ ಕಟ್ಟಡ ನಿರ್ಮಾಣಕ್ಕೆ ಅವಕಾಶ ಕೇಳಿದ್ದೆವು. ಕಂದಾಯ ಇಲಾಖೆಯ ಸಹಮತಿ ದೊರಕದ ಹಿನ್ನೆಲೆ ತಟಸ್ಥತೆ ಕಾಯ್ದುಕೊಂಡಿದ್ದೇವೆ.**

**–ಶ್ರೀಶೈಲ ಬೀಳಗಿ, ಮಾಜಿ ನಗರಾಧ್ಯಕ್ಷ.**

---

**'ದಿನಂಪ್ರತಿ ಜೀವ ಕೈಯಲ್ಲಿ ಹಿಡಿದುಕೊಂಡೇ ಸಾಗಬೇಕಾದ ಅನಿವಾರ್ಯತೆ ಇಲ್ಲಿನ ನಿವಾಸಿಗಳದ್ದು. ಅತ್ಯಂತ ಗಲೀಜು ಪ್ರದೇಶವಾಗಿ ಕಾಣುತ್ತಿರುವ ನಗರದ ಹೃದಯ ಭಾಗದಲ್ಲಿರುವ ಈ ಕಟ್ಟಡವನ್ನು ಕೂಡಲೇ ತೆರವುಗೊಳಿಸಬೇಕು'.**

**–ರಾಜು ಕುಲಕರ್ಣಿ, ಸ್ಥಳೀಯರು.**

# ಸಾಧನೆಗೈದ ವಿದ್ಯಾರ್ಥಿಗಳು ಉನ್ನತ ಹುದ್ದೆ ಅಲಂಕರಿಸಲಿ

**ಜಮಖಂಡಿ :** ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಗೈದ ಮಕ್ಕಳು ಉನ್ನತ ಹುದ್ದೆಗಳನ್ನು ಅಂಲಕರಿಸಬೇಕು. ಬಣಜಿಗ ಸಮಾಜದ ಮಕ್ಕಳು ಹೆಚ್ಚಿನ ಅಂಕಗಳನ್ನು ಪಡೆದುಕೊಂಡು ನಮ್ಮ ಸಮಾಜಕ್ಕೆ ಮಾದರಿಯಾಗಿದ್ದಾರೆಂದು ಬಣಜಿಗ ಸಮಾಜದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ರೂಡಗಿ ಹೇಳಿದರು.



ನಗರದ ದಾನಮ್ಮದೇವಿ ಸಭಾ ಭವನದಲ್ಲಿ ಬಣಜಿಗ ದೈವಮಂಡಳಿ ಮತ್ತು ರಾಜ್ಯ ಬಣಜಿಗ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿಯುಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಉನ್ನತ ಸ್ಥಾನದ ಅಧಿಕಾರಿಗಳಾಗುವ ಕನಸು ಕಂಡುಕೊಳ್ಳಬೇಕು. ಮನೆಯಲ್ಲಿ ತಂದೆ-ತಾಯಂದಿಯರ ಕರ್ತವ್ಯ ಬಹಳಷ್ಟು ಮುಖ್ಯವಾಗಿದೆ. ಪ್ರತಿಭಾ ಪುರಸ್ಕಾರ ಪಡೆದ ಮಕ್ಕಳನ್ನು ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳನ್ನಾಗಿ ರೂಪಿಸುವ ಮತ್ತು ಸ್ಫೂರ್ತಿಗೊಳಿಸುವ ಪ್ರಯತ್ನ ನಮ್ಮದಾಗಬೇಕು. ನನ್ನನ್ನು ರಾಜ್ಯಾಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವ ನಿಮಗೆ ನಾನು ಋಣಿಯಾಗಿದ್ದೇನೆ. ಸಮಾಜವನ್ನು ಮುನ್ನಡೆಸಿಕೊಂಡುಸಾಗುವಮಹತ್ತರವಾದ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದರು.

ಮುತ್ತಿನಕಂತಿಮಠದ ಪಂಡಿತಾರಾಧ್ಯ ಶಿವಲಿಂಗ ಶಿವಾಚಾರ್ಯರು, ಓಲೇಮಠದ ಆನಂದದೇವರು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಇದೇ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಮತ್ತು ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಪ್ರತಿಭಾ ಪುರಸ್ಕಾರ ಸಮಿತಿ ಅಧ್ಯಕ್ಷ ಉಮೇಶ ಬಾಂಗಿ, ಬಸವರಾಜ ನ್ಯಾಮಗೌಡ, ಧರ್ಮಲಿಂಗಯ್ಯ ಗುಡಗುಂಟಿ, ಸಮಾಜದ ಅಧ್ಯಕ್ಷ ಜಿ. ಆರ್. ಅನಂತಪೂರ, ಶಿವಾನಂದ ಜಿರಲಿ, ಸಿದ್ರಾಮಪ್ಪ ಶಿರೋಳ, ಮೇಘಾ ಮಹಾಬಳಶೆಟ್ಟಿ, ನಿಖಿತಾ ಅನಂತಪೂರ, ಮಲ್ಲಪ್ಪ ಮುದಕಣ್ಣವರ, ಸಂಗಮೇಶ ಹಲವಾಯಿ,ಮಲ್ಲುಜೈನಾಪೂರ,ನಾಗೇಂದ್ರ ಶಿರಗಣ್ಣವರ, ಬಸವರಾಜ ಕೋತಿನ, ಷಣ್ಮುಖಪ್ಪ ಮಹಾಬಳಶೆಟ್ಟಿ, ಗಿರೀಶ ಬಾಂಗಿ, ಶಂಕರ ಜಿರಲಿ, ಪ್ರಭು ಕಲ್ಯಾಣಶೆಟ್ಟಿ, ಸದಾಶಿವ ಬಾಗೇವಾಡಿ, ಶಿವಾನಂದ ಗೊಂದಿ, ಮಲ್ಲಿಕಾರ್ಜುನ ಇಂಗಳಗಾಂವಿ, ಮುರಿಗೆಪ್ಪ ಕುರಿ, ರಮೇಶ ಉಪ್ಪಿನ, ಉಮೇಶ ಮುರಗೋಡ, ಬಸವರಾಜ ಹರಕಂಗಿ, ಸಂಜಯ ಕಂಕಣವಾಡಿ, ಬಸವರಾಜ ನರಗುಂದ, ರಾಜು ಕರಣಿ, ಮುರಗೇಶ ಕಲ್ಯಾಣಶೆಟ್ಟಿ ಸಹಿತ ಇನ್ನೂ ಹಲವರು ಉಪಸ್ಥಿತರಿದ್ದರು.

ದಂಡಮ್ಮಾ ಕಲ್ಯಾಣಶೆಟ್ಟಿ ಪ್ರಾರ್ಥಿಸಿದರು. ಮಲ್ಲಿಕಾರ್ಜುನ ಜಿರಲಿ ಸ್ವಾಗತಿಸಿದರು. ಹಿರಿಯ ನ್ಯಾಯವಾದಿ ಸಿ. ಎಸ್. ಬಾಂಗಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ನಿವೃತ್ತ ಶಿಕ್ಷಕ ಚಂದ್ರಶೇಖರ ಜತ್ತಿ ಸೊಗಸಾಗಿ ನಿರೂಪಿಸಿದರು. ಸದಾಶಿವ ಬಾಗೇವಾಡಿ ವಂದಿಸಿದರು.

# ಕನ್ನಡ ಒಪ್ಪಿಕೊಂಡವರನ್ನು ಕನ್ನಡ ಅಪ್ಪಿಕೊಳ್ಳುತ್ತದೆ

**ಜಮಖಂಡಿ :** ಎರಡು ಸಾವಿರಕ್ಕಿಂತಲೂ ವರ್ಷಕ್ಕಿಂತಲೂ ಹಿಂದಿನ ಇತಿಹಾಸವಿರುವ ಕನ್ನಡ ಭಾಷೆಯನ್ನು ಒಪ್ಪಿಕೊಂಡವರನ್ನು ಕನ್ನಡ ಭಾಷೆ ಅಪ್ಪಿಕೊಳ್ಳುತ್ತದೆ. ಕಲಿಕಾ ಮಾಧ್ಯಮ ಯಾವುದೇ ಇದ್ದರೂ ಸಂಸ್ಕೃತಿ ಮತ್ತು ಸಂಸ್ಕಾರ ಕನ್ನಡವಾಗಿರಲಿ ಎಂದು ಕೆಎಎಸ್ ಅಧಿಕಾರಿ, ಬೆಳಗಾವಿಯ ಕಾಡಾ ಉಪ ಆಡಳಿತಾಧಿಕಾರಿ ಪ್ರಶಾಂತ ಹನಗಂಡಿ ಹೇಳಿದರು. ವೀರೇಶ್ವರ ಪ್ರಕಾಶನ ಜಮಖಂಡಿ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕ, ಸಾಹಿತ್ಯ ಸೌರಭ ವೇದಿಕೆಯ ಆಶ್ರಯದಲ್ಲಿ ಜ್ಞಾನ ಗಂಗೋತ್ರಿ ಪದವಿ ಪೂರ್ವ ಕಾಲೇಜಿನಲ್ಲಿ ಭಾನುವಾರ ಆಯೋಜಿಸಿದ್ದಜಮಖಂಡಿಮತ್ತುರಬಕವಿ-ಬನಹಟ್ಟಿ ತಾಲ್ಲೂಕುಗಳ ಪದವಿ ಪೂರ್ವ ಕಾಲೇಜುಗಳ ಹಾಗೂ ಪ್ರೌಢಶಾಲೆಗಳ 2024-25 ನೇ ಸಾಲಿನಲ್ಲಿ ಕನ್ನಡ ವಿಷಯಕ್ಕೆ ಪ್ರತಿಶತ ನೂರರಷ್ಟು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾದ ಕನ್ನಡ ಉಪನ್ಯಾಸಕರ, ಶಿಕ್ಷಕರ ಸನ್ಮಾನ, ಬೋಧನಾ ಪರಿಣತ ಪ್ರಶಸ್ತಿ ಪ್ರದಾನ ಹಾಗೂ ವಿಶೇಷ ಉಪನ್ಯಾಸ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.





ಖ್ಯಾತ ಹೃದಯರೋಗ ತಜ್ಞ, ನಾಡೋಜ ಡಾ. ಎಚ್. ಜಿ. ದಡ್ಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಂಕ ಗಳಿಸುವುದು, ಪದವಿ ಪಡೆಯುವುದು, ಉದ್ಯೋಗ ಗಿಟ್ಟಿಸಿಕೊಳ್ಳುವುದಕ್ಕೆ ಮಾತ್ರ ವಿದ್ಯಾರ್ಥಿಗಳ ಕಲಿಕೆಯನ್ನು ಸೀಮಿತಗೊಳಿಸದೆ ಮೂಲ ಸಂಸ್ಕೃತಿ ಮತ್ತು ಸಂಸ್ಕಾರವನ್ನು ಮಕ್ಕಳಲ್ಲಿ ತುಂಬಬೇಕು ಎಂದು ಶಿಕ್ಷಕರಿಗೆ ಸಲಹೆ ನೀಡಿದರು.

ಓಲೆಮಠದ ಆನಂದ ದೇವರು ಶ್ರೀಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಇಂದಿನ ಶಿಕ್ಷಕರಿಗೆ ಆದರ್ಶವಾಗಬೇಕು. ವಿದ್ಯಾರ್ಥಿಗಳ ಬದುಕಿಗೆ ಬಣ್ಣ ಕೊಡುವ ಶಿಕ್ಷಕರು ಕನ್ನಡ ಭಾಷೆಯನ್ನು ಉಳಿಸುವ ವಿದ್ಯಾರ್ಥಿಗಳನ್ನು ಬೆಳೆಸಬೇಕು ಎಂದು ಆಶೀರ್ವಚನ ನೀಡಿದರು.

ಯಲ್ಲಟ್ಟಿಯ ಸರ್ಕಾರಿ ಪ್ರೌಢ ಶಾಲೆಯ ಮುಖ್ಯಶಿಕ್ಷಕ, ಕೆಇಎಸ್ ಅಧಿಕಾರಿ ಶಿವಾನಂದ ಮರೆಗುದ್ದಿ ಮಾತನಾಡಿ, ಶಿಕ್ಷಕರು ಸಂಯಮ ಮತ್ತು ಉತ್ಸಾಹದಿಂದ ಇರಬೇಕು. ಕನ್ನಡ ಕೇವಲ ಅಭಿಮಾನಕ್ಕೆ ಸೀಮಿತವಾಗದೆ ಕನ್ನಡ ಅನ್ನದ ಭಾಷೆಯಾಗಬೇಕು ಎಂದರು.

ಮಧುರಖಂಡಿಯ ಸರ್ಕಾರಿ ಪ್ರೌಢ ಶಾಲೆಯ ಸಹ ಶಿಕ್ಷಕ ದುಂಡಯ್ಯ ಹಿರೇಮಠ ಮಾತನಾಡಿ, ಪ್ರಶಸ್ತಿ, ಪುರಸ್ಕಾರ, ಸನ್ಮಾನಗಳು ಶಿಕ್ಷಕರ ಜವಾಬ್ದಾರಿಯನ್ನು ಹೆಚ್ಚಿಸುತ್ತವೆ. ಕನ್ನಡ ಅಭಿಮಾನ ಕೇವಲ ವೃತ್ತಿಯಾಗಬಾರದು.ಬದಲಾಗಿಕನ್ನಡನೆಲ-ಜಲ-ಭಾಷೆಗೆ ಧಕ್ಕೆ ಬಂದಾಗ ಖಂಡಿಸುವ, ಪ್ರತಿಭಟಿಸುವ ಹಾಗೂ ವಿದ್ಯಾರ್ಥಿಗಳಲ್ಲಿ ಆ ಕುರಿತು ಅರಿವು ಮೂಡಿಸುವ ಕಾರ್ಯ ಶಿಕ್ಷಕರಿಂದ ನಡೆಯಬೇಕು ಎಂದರು.

ಸಮಾರಂಭದ ಪ್ರಾಯೋಜಕ, ನಿವೃತ್ತ ಪ್ರಾಚಾರ್ಯ ಡಾ. ಸಂಗಮೇಶ ಮಟೋಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಬಸವಜ್ಯೋತಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಟಿ. ಪಿ. ಗಿರಡ್ಡಿ, ಜ್ಞಾನ ಗಂಗೋತ್ರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಎಸ್. ಬಿ. ಹಿರೇಮಠ, ಸುಭಾಸ ಆಫ್ಸೆಟ್ ಪ್ರೆಸ್ಸಿನ ಮಾಲೀಕ ಅಮಿತ ಭೋಸಲೆ ವೇದಿಕೆಯಲ್ಲಿದ್ದರು.

ಅಖಂಡ ಜಮಖಂಡಿ ತಾಲ್ಲೂಕಿನ ಪದವಿ ಪೂರ್ವ ಕಾಲೇಜುಗಳ ಕನ್ನಡ ಉಪನ್ಯಾಸಕರು, ಪ್ರೌಢ ಶಾಲೆಗಳ ಕನ್ನಡ ಶಿಕ್ಷಕರು ಸೇರಿ ಸುಮಾರು ಒಂದು ನೂರು ಜನರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ಪುರಸ್ಕೃತರ ಪರವಾಗಿ ಡಾ. ಎಸ್. ಎಸ್. ಖಾನಾಪುರ, ಶ್ರೀಶೈಲ ಎಂ. ತೇಲಿ, ಶ್ರೀದೇವಿ ಮಠಪತಿ ತಮ್ಮ ಅನಿಸಿಕೆ ಹಂಚಿಕೊಂಡರು.

ಮುಖ್ಯ ಶಿಕ್ಷಕ ಶಂಕರ ಲಮಾಣಿ ಪ್ರಾರ್ಥನೆ ಗೀತೆ ಹಾಡಿದರು. ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಸಂತೋಷ ತಳಕೇರಿ ಸ್ವಾಗತಿಸಿದರು. ಪ್ರೊ. ರಾಜಶೇಖರ ಹೊಸಟ್ಟಿ ಅತಿಥಿಗಳನ್ನು ಪರಿಚಯಿಸಿದರು. ಶಿಕ್ಷಕರಾದ ಎನ್. ಬಿ. ಮಾಲಗಾರ, ಚಿದಾನಂದ ಜಡಿಮಠ ನಿರೂಪಿಸಿದರು. ಪ್ರಾಧ್ಯಾಪಕಿ ಡಾ. ಶ್ರೀದೇವಿ ಸುವರ್ಣಖಂಡಿ ವಂದಿಸಿದರು.

# ಬೇಡಜಂಗಮ ಮೀಸಲಾತಿಗೆ ತಾರತಮ್ಯ ಬೇಡ

**ರಬಕವಿ-ಬನಹಟ್ಟಿ :** ನ್ಯಾಯಾಲಯದ ಸಹಮತದೊಂದಿಗೆ ರಾಜ್ಯದಲ್ಲಿ ಬೇಡಜಂಗಮಕ್ಕೆ ಮೀಸಲಾತಿ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ತಕ್ಷಣ ಕಾರ್ಯತತ್ಪರವಾಗಬೇಕು. ಬದಲಾಗಿ ಜಾಗತಿಕ ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಎಸ್. ಎಂ. ಜಾಮದಾರರು, ಜಂಗಮರು ಶ್ರೀಮಂತ ಸಮಾಜವೆಂದು ಹೇಳುತ್ತಿರುವದು ತಪ್ಪೆಂದು ರಬಕವಿ-ಬನಹಟ್ಟಿ ಬೇಡಜಂಗಮದ ತಾಲೂಕಾಧ್ಯಕ್ಷ ಎಸ್. ಜಿ. ಅಮ್ಮಣಗಿಮಠ ತಿಳಿಸಿದರು.

ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಜಂಗಮರು ಭಕ್ತರ ಮನೆಯಲ್ಲಷ್ಟೇ ಬೇಡುತ್ತಾರೆ. ಅದೂ ಸ್ವಯಂ ಪಾಕಭಿಕ್ಷೆ ಹಾಗು ಕಜ್ಜಾಯದಲ್ಲಿ ಭಿಕ್ಷೆಯೆಂದು ಎರಡು ಭಿಕ್ಷೆಗಳು ಅವರಲ್ಲಿವೆ ಎನ್ನುವ ಎಸ್. ಎಂ. ಜಾಮದಾರರು ನೈಜ ಪರಿಸ್ಥಿತಿ ಹಾಗು ಅಂದಿನಿಂದ ಇಂದಿನವರೆಗೂ ಅದೇ ಪರಿಸ್ಥಿತಿಯಲ್ಲಿ ರಾಜ್ಯದ ಬೇಡ ಜಂಗಮರು ಮುನ್ನಡೆಯುತ್ತಿದ್ದಾರೆ. ನೆರೆಯ ರಾಜ್ಯಗಳಲ್ಲಿ ಈಗಾಗಲೇ ಬೇಡ ಜಂಗಮರನ್ನು ಪರಿಶಿಷ್ಟ ಜಾತಿಗೆ ಗುರ್ತಿಸಿದ್ದಾರೆ.

ಶನಿವಾರ ಬೆಂಗಳೂರಿನಲ್ಲಿ ಜರುಗಿದ ಸಭೆಯಲ್ಲಿ ಬೇಡಜಂಗಮ ಹೆಸರಿನಲ್ಲಿ ಇಡೀ ದಲಿತ ಸಮುದಾಯವನ್ನು ವಂಚಿಸುತ್ತಿದ್ದಾರೆಂಬ ಹೇಳಿಕೆ ನೀಡಿರುವುದು ಅಕ್ಷಮ್ಯ. ಅನುಭವಿ ಹಾಗು ಪಾರದರ್ಶಕವಾಗಿ ಸರ್ಕಾರದ ಹಾಗು ಮೀಸಲಾತಿಯ ಕೊಂಡಿಯಾಗಿರುವ ಜಾಮದಾರ ಅವರು ಇದನ್ನೆಲ್ಲ ಅರಿತು ಬೇಡಜಂಗಮರಿಗೆ ನೈಜ ನ್ಯಾಯ ಒದಗಿಸಬೇಕೆಂದರು.

# ಶಾಲಾ ಕೊಠಡಿ, ಅಂಗನವಾಡಿ, ರಸ್ತೆ ನಿರ್ಮಾಣಕ್ಕೆ ಭೂಮಿ ಪೂಜೆಗೆ ಶಾಸಕ ಡಾ ಎನ್.ಟಿ ಶ್ರೀನಿವಾಸ್ ಚಾಲನೆ





**ಕೂಡ್ಲಿಗಿ:** ಕೂಡ್ಲಿಗಿತಾಲೂಕಿನಕಾನಹೊಸಹಳ್ಳಿ ಹೋಬಳಿಯ ಹುಲಿಕೆರೆ ಗ್ರಾಮದ ಜನತಾ ಕಾಲೋನಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆ.ಎಸ್.ಎಚ್.ಸಿ ಯೋಜನೆ ಅಡಿಯಲ್ಲಿ 40.00 ಲಕ್ಷಗಳ ಮೊತ್ತದ 2 ಕೊಠಡಿಗಳ ನಿರ್ಮಾಣ ಹಾಗೂ ಸಿ.ಕೆ ಗುಂಟೆ ಗೊಲ್ಲರಹಟ್ಟಿ ಸ.ಹಿ.ಪ್ರಾ.ಶಾಲೆ ಕೊಠಡಿಗಳ ನಿರ್ಮಾಣ ಪಿಡಬ್ಲ್ಯೂಡಿ 33.06 ಲಕ್ಷ, ಸಿ.ಕೆ ಗುಂಟೆ ಅಂಗನವಾಡಿ ಕೇಂದ್ರದ ಕಾಮಗಾರಿ ಕೆ.ಎಸ್.ಎಚ್.ಸಿ ಅನುದಾನದಲ್ಲಿ 12.50 ಲಕ್ಷ, ಹಿರೇಕುಂಬಳಗುಂಟೆ-ಬಿ ಕೇಂದ್ರ ನೂತನ ಕೊಠಡಿ ನಿರ್ಮಾಣ ಕೆ.ಎಸ್.ಎಚ್.ಸಿ ಯೋಜನೆಯೆಲ್ಲಿ 25 ಲಕ್ಷ, ಟಿ.ಸೂರವ್ವನಹಳ್ಳಿ ಸಿಸಿ ರಸ್ತೆ ನಿರ್ಮಾಣ ಕೆ ಆರ್ ಐ ಡಿ ಎಲ್ ಯೋಜನೆ ಅಡಿಯಲ್ಲಿ 80 ಲಕ್ಷ, ಶಾಂತನಹಳ್ಳಿ ಸ.ಹಿ.ಪ್ರಾ.ಶಾಲೆ ಕೊಠಡಿ 20 ಲಕ್ಷ, ಗುಣಸಾಗರ ಸ.ಹಿ.ಪ್ರಾ.ಶಾಲೆ 20 ಲಕ್ಷ ರೂ ಯೋಜನೆಗಳಿಗೆ ಶುಕ್ರವಾರ ಶಾಸಕ ಡಾ ಶ್ರೀನಿವಾಸ್ ಎನ್.ಟಿ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಕ್ಷೇತ್ರದ ಶೈಕ್ಷಣಿಕ, ಆರೋಗ್ಯ, ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗೆ ನಿರಂತರ ಆದ್ಯತೆ ನೀಡಲಾಗುತ್ತಿದ್ದು,ಮಕ್ಕಳಶಿಕ್ಷಣಕ್ಕೆಪಾಲಕರು, ಶಿಕ್ಷಕರು ಮುತುವರ್ಜಿ ವಹಿಸಬೇಕು. ಗ್ರಾಮೀಣ ಮಕ್ಕಳು ಶಾಲೆಯಲ್ಲಿ ಮೂಲ ಸೌಕರ್ಯಗಳಿಂದ ವಂಚಿತರಾಗದಂತೆ ಸಮರ್ಪಕ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ನೂತನ ಕೊಠಡಿಗಳ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದೆವೆ.

ಇತ್ತೀಚಿನ ಬೆಳವಣಿಗೆಯಲ್ಲಿ ಗ್ರಾಮೀಣ ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸುವುದು ತೀವ್ರ ವಿರಳವಾಗಿದೆ.

ಹೀಗಾಗಿ ಸರ್ಕಾರಿ ಶಾಲೆಗಳನ್ನು ಉಳಿಸುವ ನಿಟ್ಟಿನಲ್ಲಿ ಗ್ರಾಮದಲ್ಲಿ ಸುಸಜ್ಜಿತ ಕೊಠಡಿಗಳ ನಿರ್ಮಾಣಕ್ಕೆ ಮುಂದಾಗಿದ್ದೇವೆ.

ಕ್ಷೇತ್ರದಲ್ಲಿ ವಿಶೇಷವಾಗಿ ಸುಮಾರು 20 ಹೊಸ ಶಾಲಾ ಕಟ್ಟಡಗಳು ಹಾಗೂ 20 ಶಾಲೆಗಳ ಕೋಟಡಿ ರಿಪೇರಿ , 6 ಪ್ರೌಢಶಾಲೆ ಉನ್ನತಿಕರಣ, 25 ಪ್ರಾಥಮಿಕ ಶಾಲೆ ಉನ್ನತಿಕರಣ,12 ಅಂಗನವಾಡಿ ಕಟ್ಟಡಗಳು, 3 ಅಂಗನವಾಡಿ ಮರು ನಿರ್ಮಾಣಕ್ಕೆ ಭೂಮಿ ಪೂಜೆ ನಿರ್ವಹಿಸುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ 278 ಶಾಲೆಗಳಿಗೆ ಮುಂದಿನ ದಿನಗಳಲ್ಲಿ ಮೂಲ ಸೌಕರ್ಯಗಳನ್ನು ಒದಗಿಸುವೆ, ಎಲ್ಲಾ ಹಳ್ಳಿಗಳಲ್ಲಿ ಸಿಸಿ ರಸ್ತೆ, ಚರಂಡಿಗಳು, ಆರೋಗ್ಯ, ಶಿಕ್ಷಣ, ಅಂಗನವಾಡಿ ಕೇಂದ್ರಗಳಿಗೆ ಹಾಗೂ ಕುಡಿಯುವ ನೀರಿಗೆ, ರೈತರಿಗೆ ವಿದ್ಯುತ್ ಸಂಪರ್ಕ ಒದಗಿಸಲು ಹೆಚ್ಚಿನ ಆಧ್ಯತೆ ನೀಡಲಾಗುವುದು.

ಹುಲಿಕೆರೆ ಗ್ರಾಮದ ಬಹುದಿನಗಳ ಬೇಡಿಕೆಯಾದ ಕೆಪಿಟಿಸಿಎಲ್ ಸಬ್ ಟೇಷನ್ ಅನುಮೋದನೆ ಆಗಿದೆ ಇನ್ನೇನು ಕೆಲವೇ ದಿನಗಳಲ್ಲಿ ಟೆಂಡರ್ ಕೂಗಲಾಗುವುದು ಎಂದುರು.

ಈ ಸಂದರ್ಭದಲ್ಲಿ ಜಗದೀಶ್ ಸ್ವಾಮಿ ನಿವೃತ್ತಿ ಶಿಕ್ಷಕ, ಜಿಲ್ಲನ್ ಬಾಷಾ ನಿವೃತ್ತಿ ಶಿಕ್ಷಕ, ಮುಖಂಡರಾದ ಮಾರಪ್ಪ, ಕರಿಯಪ್ಪ, ಮಾರಣ್ಣ, ಶರಣಪ್ಪ, ವೀರಭದ್ರಪ್ಪ, ಹರೀಶ್ ಸಕ್ಲಾಪುರದಹಟ್ಟಿ, ಮಂಜುನಾಥ, ಶಫಿ ಉಲ್ಲಾ, ದುರ್ಗಪ್ಪ,

ಮುಖ್ಯ ಶಿಕ್ಷಕಿ ವಾಣಿ, ಹಿರೇ ಕುಂಬಳಗುಂಟೆ ಗ್ರಾ.ಪಂ ಮಾಜಿ ಉಪಾಧ್ಯಕ್ಷ ದುರುಗಪ್ಪ, ಕೂಡ್ಲಿಗಿ ಎಪಿಎಂಸಿ ಅಧ್ಯಕ್ಷ ಕುರಿಹಟ್ಟಿ ಬೋಸಣ್ಣ, ವಕೀಲರಾದ ಟಿ ಓಂಕಾರಪ್ಪ, ಮುಖಂಡರಾದ ಹೆಚ್ ಬುಡ್ಡಾರಡ್ಡಿ, ಚುಟ್ಟಿ ಲಿಂಗನಹಟ್ಟಿ ಬಸವರಾಜ್,

ವಿ ಎಸ್ ಎಸ್ ಎನ್ ಅಧ್ಯಕ್ಷ ಜಗದೀಶ್, ರಮೇಶ್ ಹಿರೇ ಕಂಬಳಗುಂಟೆ, ಬಿ.ಟಿ ಗುದ್ದಿ ದುರು ಗೇ ಶ್, ಹಿರೇ ಕುಂಬಳಗುಂಟೆ ಮನೋಜ್ ಕುಮಾರ್, ಭದ್ರಪ್ಪ, ಸಿ.ಕೆ ಕುಂಟೆ ಅಂಜಿನಪ್ಪ, ಹೊಸಹಳ್ಳಿ, ನಾಗರಾಜ್, ವೆಂಕಟೇಶ್ ಯಂಬಳಿ ವಡ್ಡರಟ್ಟಿ, ಕೆಂಚಮ್ಮನಹಳ್ಳಿ ಓಬಳೇಶ್, ಸೇರಿದಂತೆ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸರ್ವ ಸದಸ್ಯರು, ಮುಖಂಡರು ಉಪಸ್ಥಿತರಿದ್ದರು.

# ಪ್ರತಿದಿನ ತಪ್ಪದೇ ಶಾಲೆಗೆ ಬರಬೇಕು





**ಬಳ್ಳಾರಿ :** ಮಕ್ಕಳು ದಿನಾಲೂ ಶಾಲೆಗೆ ಬರಬೇಕು. ಯಾವುದೇ ಕಾರಣಕ್ಕೂ ಶಾಲೆಗೆ ತಪ್ಪಿಸಬಾರದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವ ಮಧು ಬಂಗಾರಪ್ಪ ಅವರು ಹೇಳಿದರು.

ನಗರದ ಪಟೇಲ್ ನಗರ ಬಡಾವಣೆಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ, 7 ತರಗತಿಯ ಮಕ್ಕಳೊಂದಿಗೆ ಸಂವಾದ ನಡೆಸಿ ಅವರು ಮಾತನಾಡಿದರು. ಮನೆಯಲ್ಲಿ ಶಾಲೆಗೆ ಹೋಗಲು ಅಡ್ಡಿಪಡಿಸಿದರೆ, ನಾನು ತಪ್ಪದೇ ಶಾಲೆಗೆ ಹೋಗುತ್ತೇನೆ ಎಂದು ಹೇಳಬೇಕು. ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ ಪಡೆಯಬೇಕು. ಆರೋಗ್ಯದಿಂದಿರಬೇಕು. ಶಿಕ್ಷಣ ಪಡೆದುಕೊಂಡು ಉನ್ನತ ವ್ಯಕ್ತಿಗಳಾಗಿ ಹೊರಹೊಮ್ಮಬೇಕು ಎಂದು ಸಚಿವರು ಆಶಿಸಿದರು.

*ಸಂವಿಧಾನ ಪೀಠಿಕೆ ಪ್ರಸ್ತುತಪಡಿಸಿದ ರಿತಿಕಾ:*

ವಿದ್ಯಾರ್ಥಿಗಳಿಗೆ ಸಂವಿಧಾನ ಪೀಠಿಕೆ ಯಾರೂ ಹೇಳುತ್ತೀರಾ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವ ಎಸ್.ಮಧು ಬಂಗಾರಪ್ಪ ಅವರು ಕೇಳಿದಾಗ, ಶಾಲೆಯ ಐದನೇ ತರಗತಿ ವಿದ್ಯಾರ್ಥಿನಿ ರಿತಿಕಾ ಅವರು ಸಂವಿಧಾನ ಪೀಠಿಕೆಯನ್ನು ವಿಸ್ತಾರವಾಗಿ ವಾಚನ ಮಾಡಿದರು.

*ಮಕ್ಕಳೊಂದಿಗೆ ಊಟ ಸವಿದ ಸಚಿವರು:*

ಶಾಲೆಯ ವಿವಿಧ ಕೊಠಡಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಚಿವರು, ಬಳಿಕ ಮಕ್ಕಳೊಂದಿಗೆ ಮಧ್ಯಾಹ್ನದ ಬಿಸಿಯೂಟ ಸವಿದರು. ಊಟದಲ್ಲಿ ಅನ್ನ, ಸಾಂಬಾರು ಜೊತೆಗೆ ಉಪ್ಪಿನಕಾಯಿ ಮತ್ತು ಮೊಟ್ಟೆ ನೀಡಲಾಗಿತ್ತು. ಇದೇ ವೇಳೆ ಊಟದ ರುಚಿಯ ಬಗ್ಗೆ ಮಕ್ಕಳ ಅಭಿಪ್ರಾಯ ಪಡೆದುಕೊಂಡರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮ್ಮೈರ್, ಕಲಬುರಗಿ ವಿಭಾಗದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಅಪರ ಆಯುಕ್ತ ಡಾ.ಆಕಾಶ್ ಶಂಕರ್, ಡಿಡಿಪಿಐ ಬಿ.ಉಮಾದೇವಿ, ವಿಷಯ ಪರಿವೀಕ್ಷಕಿ ವೇದಾವತಿ, ಶಾಲೆಯ ಮುಖ್ಯಗುರುಗಳಾದ ಜಯಶ್ರೀ ಸೇರಿದಂತೆ ಬಿಇಒ, ಎಸ್‌ಡಿಎಂಸಿ ಅಧ್ಯಕ್ಷರು, ಶಾಲಾ ಶಿಕ್ಷಕರು, ಶಾಲಾ ಶಿಕ್ಷಕರು ಹಾಗೂ ಇತರರು ಇದ್ದರು.

# ಡಿಎಸ್‌ಎಸ್ ಮಹಿಳಾ ಘಟಕ ಜಿಲ್ಲಾಧ್ಯಕ್ಷೆಯಾಗಿ ಎಂ.ಪಿ.ಕಮಲ ನೇಮಕ

**ಬಳ್ಳಾರಿ :** ಕರ್ನಾಟಕ ರಾಜ್ಯ ಮಹಿಳಾ ಘಟಕ ಅಧ್ಯಕ್ಷರಾದ ಎಂ.ಶಾಂತ ಇವರ ನೇತೃತ್ವದಲ್ಲಿ ರಾಜ್ಯ ಪದಾಧಿಕಾರಿಗಳ ಸಮ್ಮುಖದಲ್ಲಿ ಬಳ್ಳಾರಿ ಜಿಲ್ಲಾ ಅಧ್ಯಕ್ಷರನ್ನಾಗಿ ಮತ್ತು ತಾಲೂಕು ಪದಾಧಿಕಾರಿಗಳನ್ನಾಗಿ ನೇಮಕ ಮಾಡಿ ಆದೇಶ ಪತ್ರವನ್ನು ವಿತರಿಸಲಾಯಿತು.



ನಗರದ ಸ್ನೇಹ ಸಂಪುಟ ಸಭಾಂಗಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ವಿಮೋಚನವಾದ) ಅರ್.ಗುರುಮೂರ್ತಿ ಬಣದ ವತಿಯಿಂದ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಬಿಆರ್.ಉಮಾ, ಕುರುಗೋಡು ಪಟ್ಟಣದ ನಗರ ಅಧ್ಯಕ್ಷರಾಗಿ ಮಾಳಮ್ಮ ಮತ್ತು 23ನೆ ವಾರ್ಡ್ ಅಧ್ಯಕ್ಷರಾಗಿ ದುರುಗಮ್ಮ, ಜಿಲ್ಲಾ ಪದಾಧಿಕಾರಿಗಳಾಗಿ ಪಾರ್ವತಿ, ಶಾರದಾ, ಪಾರ್ವತಿ, ಪದ್ಮ, ಈಶ್ವರಮ್ಮ, ಸುಜಾತ, ಶೇಕಮ್ಮ, ಲತಾ, ಗಂಗಮ್ಮ, ರಾಜಮ್ಮ, ರೂಪ ಇವರುಗಳನ್ನು ಸಂಘಟನೆಯ ಮಹಿಳಾ ಘಟಕ ರಾಜ್ಯಾಧ್ಯಕ್ಷರಾದ ಎಂ.ಶಾಂತ ಅವರು ಆದೇಶ ಪತ್ರವನ್ನು ವಿತರಿಸಿ ನೇಮಕ ಮಾಡಿದ್ದಾರೆ.

ಎಂ.ಶಾಂತಾ ಅವರು ಮಾತನಾಡಿ ನಮ್ಮ ಡಿಎಸ್‌ಎಸ್ (ವಿಮೋಚನವಾದ) ಸಂಘಟನೆ ಮಹಿಳೆಯರಿಗೆ ಶಕ್ತಿಯಂತೆ ಬಲವಾಗಿ ನಿಂತಿದೆ, ಅದಕ್ಕಾಗಿ ತಾವೆಲ್ಲರೂ ಒಗ್ಗಟ್ಟಾಗಿ ಹೋರಾಟ ಸಮಾಜ ಸೇವೆ ಹೀಗೆ ಹತ್ತಾರು ಕೆಲಸ ಕಾರ್ಯಗಳಲ್ಲಿ ತಾವು ಭಾಗಿಯಾಗಬೇಕು ಎಂದು ಹೇಳಿದರು.

ಬಳ್ಳಾರಿಯಲ್ಲಿ ಜಿಲ್ಲಾಧ್ಯಕ್ಷರಾದ ಎಂ.ಪಿ.ಕಮಲ ಅವರು ಮತ್ತು ನಾನು ಸದಾ ತಮ್ಮ ಜೊತೆಗೆ ಇರುತ್ತೇವೆ. ನಮ್ಮ ಸಂಘಟನೆ ಜಿಲ್ಲೆ ತಾಲೂಕು ಮತ್ತು ಗ್ರಾಮ ಘಟಕದಲ್ಲಿ ಸಂಘಟನೆಯನ್ನು ಕಟ್ಟಿ ಮುಂದು ಸಾಗುತ್ತಿದ್ದೇವೆ ಎಂದು ಹೇಳಿದರು ತಾವು ಕೂಡ ಬೆಳೆಯಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಈ ಸಂದರ್ಭದಲ್ಲಿ ಡಿಎಸ್‌ಎಸ್ ವಿಮೋಚನವಾದ ಮಹಿಳಾ ರಾಜ್ಯಾಧ್ಯಕ್ಷರಾದ ಎಂ.ಶಾಂತ, ಜಿಲ್ಲಾಧ್ಯಕ್ಷರಾದ ಎಂ.ಪಿ.ಕಮಲ, ರಾಜ್ಯ ಕಾರ್ಯದರ್ಶಿ ದ್ರಾಕ್ಷಾಯಿಣಿ, ರಾಜ್ಯ ಉಪಾಧ್ಯಕ್ಷರಾದ ಯಶೋದಮ್ಮ, ಭಾಗ್ಯಮ್ಮ, ಸೀತಮ್ಮ,

ಕರ್ನಾಟಕ ಏಕೀಕರಣ ರಕ್ಷಣಾ ಸೇನಾ ಸಮಿತಿಯ ರಾಜ್ಯ ಮಹಿಳಾ ಅಧ್ಯಕ್ಷೆ ಲಕ್ಷ್ಮಿ ದೇವಿ, ಡಿಎಸ್‌ಎಸ್ ಮಹಿಳಾ ಜಿಲ್ಲಾ ಕಾರ್ಯದರ್ಶಿ ಉಮಾ ದೇವಿ, ಜಿಲ್ಲಾ ಉಪಾಧ್ಯಕ್ಷೆ ವಸಂತಮ್ಮ, ಮಂಜುಳಾ, ಕಾರ್ಯದರ್ಶಿ ರೀಟಾ, ಸಂಘಟನಾ ಕಾರ್ಯದರ್ಶಿ ಸುಜಾತ, ಮಂಜುಳಾ, ಉಮಾ, ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಗೊಂದಲ ಗೂಡಾದ ವಸತಿ ಶಾಲೆಗಳ ಸೀಟು ಹಂಚಿಕೆ: ಸಾರ್ವಜನಿಕರ ಪರದಾಟ ವಿದ್ಯಾರ್ಥಿಗಳ ಸಂಕಟ

**ಬಳ್ಳಾರಿ :** ಮೊರಾರ್ಜಿ ದೇಸಾಯಿ, ಗಾಂಧಿ ತತ್ವ, ನವೋದಯ ಸೇರಿದಂತೆ ಕೇಂದ್ರ ಸರ್ಕಾರಿ ಸ್ವಾಮ್ಯದ ವಸತಿ ಶಾಲೆಗಳಿಗೆ ಪ್ರವೇಶವನ್ನು ಬಯಸಿ ನೂರಾರು ವಿದ್ಯಾರ್ಥಿಗಳು ಅರ್ಜಿಯನ್ನು ಸಲ್ಲಿಸಿದ್ದರು, ಅಷ್ಟೇ ಅಲ್ಲದೆ 6, 7 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳು ವರ್ಗಾವಣೆಯನ್ನು ಬಯಸಿ ಹಲವಾರು ಅರ್ಜಿಗಳನ್ನು ಆಯಾ ಮುಖ್ಯ ಉಪಾಧ್ಯಾಯರಲ್ಲಿ ಸಲ್ಲಿಸಿಕೊಂಡಿದ್ದು ಅವುಗಳನ್ನು ಇಂದು ಸಹಾಯಕ ಆಯುಕ್ತರ ಕಚೇರಿಯಲ್ಲಿ ಸಭೆ ನಡೆಸುವ ಮೂಲಕ ಇತ್ಯರ್ಥಪಡಿಸಲಾಯಿತು.



ಆದರೆ ಈ ವಿದ್ಯಾರ್ಥಿಗಳ ಅರ್ಜಿಗಳನ್ನು ಇಂದು ಇತ್ಯರ್ಥಪಡಿಸದೆ ಮತ್ತೆ ಮುಂದಿನ ವಾರಕ್ಕೆ ಸಭೆಯನ್ನು ಮುಂದೂಡಿರುವುದಾಗಿ ಸಾಯಕ ಆಯುಕ್ತರು ಸಭೆಯನ್ನು ಮುಕ್ತಾಯಗೊಳಿಸಿದರು.

ಇದರಿಂದ ಸಹಾಯಕ ಆಯುಕ್ತರ ಕಚೇರಿಗೆ ಬಂದಿದ್ದ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಗೊಂದಲದಿಂದ ಮರಳಿದರು. ಹೀಗೆ ಪದೇ ಪದೇ ಹಲವಾರು ಸಲ ಕಚೇರಿಗೆ ಅಲೆದಾಡಿಸುತ್ತಿರುವ ಪ್ರಾಂಶುಪಾಲರು ಮತ್ತು ಸಂಬಂಧಿಸಿದ ಅಧಿಕಾರಿಗಳನ್ನು ಪೋಷಕರು ತರಾಟೆಗೆ ತೆಗೆದುಕೊಂಡರು. ದಲಿತ ಮುಖಂಡರು ಮತ್ತು ಹಿರಿಯ ಪತ್ರಕರ್ತರಾದ ಚಳ್ಳಗುರ್ಕಿ ಸೋಮಶೇಖರ್ ಅವರು ಹೀಗೆ ಪದೇ ಪದೇ ವಿದ್ಯಾರ್ಥಿಗಳನ್ನು ಮತ್ತು ಪೋಷಕರ ಕಚೇರಿಗೆ ಅಲೆದಾಟ ತಪ್ಪಿಸುವಂತೆ ವಸತಿ ಶಾಲೆಗಳ ಮುಖ್ಯೋಪಾಧ್ಯಾಯರು ಮತ್ತು ಪ್ರಾಂಶುಪಾಲರನ್ನು ಹಿಗ್ಗಾಮುಗ್ಗ ತರಾಟೆಗೆ ತೆಗೆದುಕೊಂಡು ಕೂಡಲೇ ಪ್ರವೇಶ ಮತ್ತು ವರ್ಗಾವಣೆಯ ಸಮಸ್ಯೆಯನ್ನು ಪರಿಹರಿಸಬೇಕೆಂದು ಒತ್ತಾಯಿಸಿದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State